ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 13ರವರೆಗೆ ಏರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ-

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಪ್ರೊ: ಬಿ.ಕೆ. ಚಂದ್ರಶೇಖರ್ (ವಾರ್ತಾ ಮತ್ತು ಪ್ರಚಾರ ಇಲಾಖೆ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 2000ನೇ ಸಾಲಿನ ಕರ್ನಾಟಕ ಮಾಹಿತಿ ಪಡೆಯಲು ಹಕ್ಕು ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

8. (i) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕ, 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ಶಿವಣ್ಣ (ಹಣಕಾಸಿನ ರಾಜ್ಯ ಸಚಿವರು) (ಮುಖ್ಯಮಂತ್ರಿಗಳ ಪರವಾಗಿ) :— ಮಾನ್ಯ ಅಧ್ಯಕ್ಷರೇ "ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

+ ಶ್ರೀ ಎಂ. ಶಿವಣ್ಣ (ಹಣಕಾಸಿನ ರಾಜ್ಯ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ನಾನು ಪ್ರಾರಂಭದಲ್ಲೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದು ಸೂಕ್ತವೆಂದು ಭಾವನೆ ಮಾಡಿದ್ದೇನೆ. 1999ರಲ್ಲೇ ಈ ಮಸೂದೆಯನ್ನು ಹಿಂದಿನ ಸರ್ಕಾರದಲ್ಲಿ ವಿಧಾನ

ಪರಿಷತ್ತಿನಲ್ಲಿ ಅಂದಿನ ವಿತ್ತ ಸಚಿವರು ಮಂಡನೆ ಮಾಡಿ, ಆಲ್ಲಿ ಪಾಸ್ ಆದ ನಂತರ ಈ ಸದನಕ್ಕೆ ಬಂದಿರತಕ್ಕಂಥಾದ್ದು ಆಗಿದೆ. ಈ ಮಸೂದೆಯ ಉದ್ದೇಶ ಇಷ್ಟೆ. ನಾವು ಸರ್ಕಾರದ ಮತಿಯಿಂದ ಮತ್ತು ಸರ್ಕಾರದ ವಿವಿಧ ಇಲಾಖೆಗಳ ಮೂಲಕವಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡತಕ್ಕ ಸಂದರ್ಭದಲ್ಲಿ ಟೆಂಡರುಗಳನ್ನು ಕರೆಯತಕ್ಕ ವ್ಯವಸ್ಥೆ ಇದೆ. ಈ ಟೆಂಡರ್ ಫಾರಂಗಳೇ ಅನೇಕರ ಕೈಗೆ ಸಿಗದೇ, ಅವರದೇ ಆದಂಥ ಒಂದು ವ್ಯವಸ್ಥೆಯನ್ನು ಮಾಡಿಕೊಂಡು ಸಂಶಯಕ್ಕೆ ಆಸ್ಪದ ವಾಗಿದೆ. ಈ ಸಂದರ್ಭದಲ್ಲಿ, ಇದರಲ್ಲಿ ಪಾರದರ್ಶಕತೆ ಇರಬೇಕು, ಆ ಟೆಂಡರ್ ಫಾರಂಗಳು ಎಲ್ಲರಿಗೂ ಸಿಗುವ ರೀತಿಯಲ್ಲಿ ಇರಬೇಕು ಎನ್ನತಕ್ಕಂಥ ಸದುದ್ದೇಶದಿಂದ ಮತ್ತು ಇನ್ನೂ ಅನೇಕ ಉದ್ದೇಶಗಳನ್ನು ಇಟ್ಟುಕೊಂಡು ಈ ಮಸೂದೆಯನ್ನು ತರಲಾಗಿದೆ. ಬಹು ಮುಖ್ಯವಾಗಿ ಟೆಂಡರ್ ಕರೆಯುವಾಗ ಜಿಲ್ಲಾಮಟ್ಟದ ಒಬ್ಬ ಬುಲೆಟಿನ್ ಆಫೀಸರನ್ನು ನೇಮಕ ಮಾಡಿ, ರಾಜ್ಯ ಮಟ್ಟದಲ್ಲಿ ಮೊದಲನೆಯದಾಗಿ ಒಂದು ಜಿಲ್ಲೆಗಿಂತ ಹೆಚ್ಚಿನ ಜಿಲ್ಲೆಗೆ ಸಂಬಂಧ ಇದ್ದಂಥ ಸಂದರ್ಭದಲ್ಲಿ ಟೆಂಡರ್‌ಗಳನ್ನು ಕರೆಯುವಾಗ ಉಪಕಾರ್ಯದರ್ಶಿ ಮಟ್ಟದ ಒಬ್ಬ ಟೆಂಡರ್ ಬುಲೆಟಿನ್ ಆಫೀಸರ್ ನೇಮಕ ಮಾಡಲಾಗುತ್ತದೆ. ಆದೇ ರೀತಿಯಲ್ಲಿ ಜಿಲ್ಲಾಮಟ್ಟದಲ್ಲೂ ಕೂಡ, ಆ ಜಿಲ್ಲೆಯ ವ್ಯಾಪ್ತಿಗೆ ಸಂಬಂಧಪಟ್ಟಂತೆ ಜಿಲ್ಲಾ ಬುಲೆಟಿನ್ ಆಫೀಸರ್ ನೇಮಕ ಮಾಡತಕ್ಕಂಥ ವ್ಯವಸ್ಥೆ ಇರತಕ್ಕಂಥಾದ್ದು. ಇದರಲ್ಲಿ ಸರ್ಕಾರದವತಿಯಿಂದ ಮಾಡತಕ್ಕ ಟೆಂಡರುಗಳಿಗೆ 5 ಲಕ್ಷ ರೂಪಾಯಿಗಳಿಗಿಂತ ಮೀರಬಾರದು ಎಂಬ ಉದ್ದೇಶ ಮಂತ್ರಿ ಇಲ್ಲಿ ಬಹು ಮುಖ್ಯವಾಗಿ ಈ ಟೆಂಡರ್‌ಗಳನ್ನು ಕರೆಯುವಾಗ ಒಂದು ಕೋಟಿ ರೂಪಾಯಿಗಳಿಗಿಂತ ಮೇಲ್ಪಟ್ಟು ಇದ್ದರೆ, ಎಲ್ಲಾ ಕಛೇರಿಗಳಲ್ಲೂ ಕೂಡ ಲಭ್ಯವಿರುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಇರತಕ್ಕಂಥಾದ್ದು. ಜೊತೆಗೆ ಮುಖ್ಯವಾಗಿ ನಾವು ಟೆಂಡರ್‌ಗಳನ್ನು ಕರೆಯುವಾಗ ಹೆಚ್ಚಿನ ಮೊತ್ತ ಇದ್ದಂಥಾದ್ದಕ್ಕೆ ಟೆಂಡರ್ ಕರೆದು ಮಾಡತಕ್ಕಂಥಾದ್ದು ಇದೆ. ಆದರೆ, ಕೆಲವು ಸಂದರ್ಭದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಿನಿ ವಾಟರ್ ಸಪ್ಲೈ ತೆಗೆದುಕೊಳ್ಳುವಾಗ ಅಥವಾ ಶಾಲಾ ಕೊಠಡಿಗಳ ನಿರ್ಮಾಣ ಮಾಡತಕ್ಕ ಸಂದರ್ಭ ಬಂದಾಗ ಟೆಂಡರ್ ಕರೆದರೆ ಅದು ಸೂಕ್ತವಾಗುವುದಿಲ್ಲವೆಂದು 2 ಲಕ್ಷ, 1 ಲಕ್ಷಕ್ಕೆ ಇತಿಮಿತಿಗೊಳಿಸುವುದನ್ನೂ ಮಾಡಿದೆ. ಹಿಂದಿನ ಸರ್ಕಾರದಲ್ಲಿ ಈ ಪಾರದರ್ಶಕತೆ ಬಿಲ್ಲನ್ನು ತರುವಾಗ ಸದುದ್ದೇಶದಿಂದಲೇ ತಂದಿದ್ದಾರೆ. ನಮ್ಮ ಸರ್ಕಾರ ಕೂಡ ಇದಕ್ಕೆ ಹೆಚ್ಚಿನ ಮಹತ್ವ ನೀಡಬೇಕೆಂದು ಮತ್ತು ಹೆಚ್ಚಿನ ಪಾರದರ್ಶಕತೆ ಇರಬೇಕೆಂದು 5 ಕೋಟಿಗೂ ಹೆಚ್ಚು ಇದ್ದ ಸಂದರ್ಭದಲ್ಲಿ ಅದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಪರಿಶೀಲನಾ ಸಮಿತಿಯನ್ನು ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದೇವೆ. ಬಹು ಮುಖ್ಯವಾಗಿ ಈ ಮಸೂದೆಯಲ್ಲಿ ಟೆಂಡರಿನಲ್ಲಿರತಕ್ಕ ನಿಯಮಗಳನ್ನು ವೈಯಲೇಟ್ ಮಾಡಿದಂಥ ಅಧಿಕಾರಿಗಳಿಗೆ ಮೂರು ವರ್ಷಗಳ ಸೆರೆವಾಸ ಜೊತೆಗೆ 5 ಸಾವಿರ ರೂಪಾಯಿಗಳ ಜುಲ್ಮಾನೆ ವಿಧಿಸತಕ್ಕ ವ್ಯವಸ್ಥೆಯನ್ನೂ ಕೂಡ ಮಾಡಿದೆ ಎಂಬುದನ್ನು ಈ ಸಂದರ್ಭದಲ್ಲಿ ಮಾನ್ಯ ಸಚಿವರ

ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಇದನ್ನು ಮಾಡುವಾಗ, ಇದರಲ್ಲಿ ಹೆಚ್ಚಿನ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ ಮಲೆನಾಡು ಅಭಿವೃದ್ಧಿ ಮಂಡಲಿ ಮತ್ತು ಬಯಲು ಸೀಮೆ ಅಭಿವೃದ್ಧಿ ಮಂಡಳಿ ಇಂತಹ ಅಭಿವೃದ್ಧಿ ಮಂಡಳಿಗಳಿಗೂ ಕೂಡ ಒಂದು ಇತಿಮಿತಿಯನ್ನು ಒಳಪಡಿಸಿ ಮಾಡಲಾಗಿದೆ; ಈ ಬಿಲ್ಲನ್ನು ಈ ಸದನ ಪಾಸ್ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಹಣಕಾಸಿನ ಸಚಿವರು ಏನು ಒಂದು ವಿಧೇಯಕವನ್ನು ಸದನದಲ್ಲಿ ತಂದಿದ್ದಾರೆ, ಇಲ್ಲಿ ಬಹು ಮುಖ್ಯವಾಗಿ ಟೆಂಡರ್ ಬಗ್ಗೆ ಇರುವಂತಹ ವಿಚಾರ. ಬಹುಶ: ಇದುವರೆಗೂ ಇದ್ದಂತಹ ವ್ಯವಸ್ಥೆಯನ್ನು ನೋಡಿದರೆ ಈ ಟೆಂಡರ್‌ಗಳಲ್ಲಿ ಕೆಲವೊಂದು ವೆಸ್ಟೆಡ್ ಇಂಟ್ರೆಸ್ಟ್, ಇರುವುದು ಚೈನ್ ಅಂತ ಮಾಡಿಕೊಂಡು ಅವರೇ ನಾಲ್ಕು ಜನ ಮತ್ತೆ 5ನೇ ಜನ ಬರುವಂತೆಯೇ ಇಲ್ಲ, ಆ ನಾಲ್ಕು ಜನ ಅಷ್ಟೇ ಟೆಂಡರ್ ಹಾಕುವುದು, ಆ ನಾಲ್ಕು ಜನರಲ್ಲಿ ಒಬ್ಬರು ಟೆಂಡರ್ ಫೈನಲ್ ಆಗಿ ತೆಗೆದುಕೊಳ್ಳುವುದು. ಇದನ್ನು ಮಾಡಿಕೊಂಡು ಬಂದಿದ್ದನ್ನು ನಾವು ನೋಡಿದ್ದೇವೆ. ಇದನ್ನು ಅವಾಯ್ಡ್ ಮಾಡುವುದಕ್ಕೆ ನಾವು ಈ ವಿಧೇಯಕವನ್ನು ತೆಗೆದುಕೊಂಡು ಬಂದಿದ್ದೇವೆಂದು ಹೇಳಿತ್ತಿದ್ದೀರಿ. ಇದರಲ್ಲಿ ವೆಸ್ಟೆಡ್ ಇಂಟ್ರೆಸ್ಟ್ ಕೂಡಿವೆ. ಬಹುಶ: ನಮ್ಮ ಕರ್ನಾಟಕ ರಾಜ್ಯದ ಯೋಜನೆಗಳಲ್ಲಿ ಬಹಳಷ್ಟು ಟೆಂಡರ್‌ಗಳನ್ನು ಹಿಡಿಯುವುದು ಆಂಧ್ರಪ್ರದೇಶದವರು. ಅವರು ಇಲ್ಲಿ ಕೆಲವೊಂದು ವ್ಯವಸ್ಥೆಗಳನ್ನು ಮಾಡಿಕೊಂಡು ಕೋಟ್ಯಾಂತರ ರೂಪಾಯಿಗಳ ಟೆಂಡರ್‌ಗಳನ್ನು ತೆಗೆದುಕೊಳ್ಳುವುದು ಬಹಳಷ್ಟು ಆಂಧ್ರಪ್ರದೇಶದವರು. ಅದರಲ್ಲಿ ಚೈನ್ ಮಾಡುವಂತಾದ್ದು ಮಾಡಿದೆ. ಇದು ಬಹಳಷ್ಟು ಇಲಾಖೆಗಳಲ್ಲಿ ನಡೆಯುತ್ತಿದೆ. ಇದನ್ನು ಅವಾಯ್ಡ್ ಮಾಡಿದರೆ ಬಹಳ ಒಳ್ಳೆಯದು. ನಾವು ಕಾನೂನುಗಳನ್ನು ಮಾಡುತ್ತೇವೆ. ವೆಸ್ಟೆಡ್ ಇಂಟ್ರೆಸ್ಟ್ ಇದ್ದಂತಹವರು ಈ ಕಾನೂನಿನಲ್ಲಿ ಇದ್ದಂತಹ ಲೂಪ್‌ಹೋಲ್ಸ್‌ಗಳನ್ನು ಮೀರಿ ಮತ್ತೆ ಆ ಕಾನೂನನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳುವಂಥಾದ್ದು ಇದೆ. ಯಾವುದೇ ಇಲಾಖೆ ಇರಲಿ ಮುಖ್ಯವಾಗಿ ಈ ಚೈನ್ ಅಂತ ಏನು ಮಾಡಿಕೊಂಡಿದ್ದಾರೆ ಕೆಲವರು ವೆಸ್ಟೆಡ್ ಇಂಟ್ರೆಸ್ಟ್ ಇದ್ದವರು ಇದನ್ನು ತಪ್ಪಿಸುವುದಕ್ಕೆ ತಾವು ಏನು ಮಾಡುತ್ತೀರಿ? ಈ ಕಾನೂನು ಈಗ ಪಾಸ್ ಆಗಬಹುದು, ಆದರೆ ಈ ಕಾನೂನು ಅನುಷ್ಠಾನವಾಗುವುದು ಬಹಳ ಮುಖ್ಯ ಇದೆ. ನನಗೆ ಇವತ್ತೂ ಸಂಶಯ ಇದೆ. ಈ ಕಾನೂನು ಆದಮೇಲೂ ಸಹ ಈ ಚೈನ್ ಮಾಡುವಂತಾದ್ದು ಕೆಲವು ಕಂಟ್ರಾಕ್ಟರ್ಸ್ ಮಾಡುತ್ತಿದ್ದಾರಲ್ಲ ಅದನ್ನು ತಡೆಗಟ್ಟಲು ಆಗುತ್ತದೆಯೋ ಇಲ್ಲವೋ ಎನ್ನುವ ಸಂಶಯ ನನಗೆ ಇದೆ. ಅದರ ಬಗ್ಗೆ ಸರ್ಕಾರ ಒಂದು ಗಂಭೀರವಾದ ಪ್ರಯತ್ನ ಮಾಡಬೇಕಾಗಿದೆ. ಅದಕ್ಕಿಂತ ಮುಂದೆ ಕೆಲವು ಅಧಿಕಾರಿಗಳು ಯಾವ ರೀತಿ ಈ ವೆಸ್ಟೆಡ್ ಇಂಟ್ರೆಸ್ಟ್ ಇದ್ದವರು ಇದ್ದಾರೆ ಅದೇ ರೀತಿಯಲ್ಲಿ ವೆಸ್ಟೆಡ್ ಇಂಟ್ರೆಸ್ಟ್ ಇರುವ

ಅಧಿಕಾರಿಶಾಹಿ ಸಹ ಇದ್ದಾರೆ. ಅವರು ತಮಗೆ ಬೇಕಾದಂತಹವರಿಗೆ ಟೆಂಡರ್ ಫಾರಮ್ ಕೊಡುವಂಥಾದ್ದು, ಇವತ್ತು ಎಲ್ಲಿಯವರೆಗೂ ಹೋಗಿದೆ ಅಂದರೆ ಟೆಂಡರ್ ಫಾರಮ್ ತೆಗೆದುಕೊಂಡರೆ ಆಲ್‌ಮೋಸ್ಟ್ ಅವನಿಗೆ ಟೆಂಡರ್ ಕನ್‌ಫರ್ಮ್ ಆದಂತೆ. ಹೀಗಾಗಿ ಆ ಟೆಂಡರ್ ಫಾರಮ್ ಎಷ್ಟೋ ಜನರಿಗೆ ಸಿಗುವುದಿಲ್ಲ. ಪಾಪ ಎಷ್ಟೋ ಜನ ಹಾನೆಸ್ಟ್ ಆಗಿ ಕೆಲಸ ಮಾಡಬೇಕೆಂದರೂ ಆ ಕಾಂಟ್ರಾಕ್ಟ್ ಕೆಲಸ ತೆಗೆದುಕೊಳ್ಳಬೇಕೆಂದರೂ ಸಂಬಂಧಪಟ್ಟಂತಹ ಅಧಿಕಾರಿ ಆ ಟೆಂಡರ್ ಫಾರಮ್ ಕೊಡುವುದಿಲ್ಲ. ಟೆಂಡರ್ ಫಾರಮ್ ಕೊಡದಿದ್ದ ಮೇಲೆ ಆತ ಟೆಂಡರ್ ಹೇಗೆ ಹಾಕುತ್ತಾನೆ? ಹೀಗಾಗಿ ನೀವು ಈಗ ಈ ಕಾನೂನು ತೆಗೆದುಕೊಂಡು ಬಂದಿದ್ದೀರಿ, ನಾಳೆ ಸಂಬಂಧಪಟ್ಟ ಅಧಿಕಾರಿಗಳು ಟೆಂಡರ್ ಫಾರಮ್ ಕೊಡುವಂತಾದ್ದನ್ನೇ ಮಾಡಲಿಲ್ಲ ಅಂದರೆ ಅದಕ್ಕೆ ಏನು ರೆಮಿಡಿ ಇದೆ, ಎನ್ನುವಂತಾದ್ದು ಕ್ಲಿಯರ್ ಆಗಲಿಲ್ಲ. ಅದರ ಬಗ್ಗೆ ಕ್ಲಾರಿಫೈ ಮಾಡುವಂಥದ್ದು ಆಗಬೇಕು. ಇಲ್ಲಿ ಇನ್ನೊಂದು ರಿಯಾಯಿತಿಯನ್ನು ಮಾಡಿದ್ದೀರಿ ಅದೇನೆಂದರೆ, ವಿಶ್ವದ ಅಂತರರಾಷ್ಟ್ರೀಯ ನಿಧಿಗಳಿಂದ ತೆಗೆದುಕೊಂಡಹಂತಹ ಕೆಲಸಗಳು, ಯೋಜನೆಗಳು ಏನು ಇವೆ ಅವುಗಳಿಗೆ ಈ ಕಾನೂನು ಅಪ್ಲೈ ಆಗುವುದಿಲ್ಲ ಅಂತ ಹೇಳಿದ್ದೀರಿ. ಇದು ಹೆಚ್ಚು ಕಡಿಮೆ ನಮ್ಮ ರಾಜ್ಯದಲ್ಲಿ ನೀವು ಏನು ವಿಶ್ವ ಬ್ಯಾಂಕ್ ನೆರವಿನಿಂದ ಹಣವನ್ನು ತೆಗೆದುಕೊಂಡು ಬರುತ್ತಿದ್ದೀರಿ, ಮೊನ್ನೆ 15 ಸಾವಿರ ಕೋಟಿ ರೂಪಾಯಿಗಳ ಸಾಲವನ್ನು ಕೊಡುತ್ತೇವೆಂದು ಹೇಳಿ ಹೋಗಿದ್ದಾರೆ, ಆ ಯೋಜನೆಗಳಿಗೆ ಈ ಕಾನೂನು ಅನ್ವಯಿಸುವುದಿಲ್ಲ ಅಂದರೆ ಇನ್ನು ಯಾವ ಯಾವ ಯೋಜನೆಗಳಿಗೆ ಈ ಕಾನೂನು ಅನ್ವಯಿಸುತ್ತದೆ? ಈ ಕಾನೂನನ್ನು ಎಲ್ಲಾ ಯೋಜನೆಗಳಿಗೂ ಅನ್ವಯಿಸಿದರೆ ಒಳ್ಳೆಯದು. ಆಮೇಲೆ ತಾವು ಕೆಲವು ಕಾಮಗಾರಿಗಳ ಎಸ್ಟಿಮೇಟ್ ಮಾಡುತ್ತೀರಿ, ನಾವು ಆಡಳಿತದಲ್ಲಿ ಪಾರದರ್ಶಕತೆಯ ಬಗ್ಗೆ ಮಾತನಾಡುತ್ತೇವೆ ಆದರೆ ಇವತ್ತು ಏನಾಗುತ್ತಿದೆ ಅಂದರೆ ಯಾವುದೋ ಒಂದು ತಾಲ್ಲೂಕು ಪಂಚಾಯಿತಿ ಅಥವಾ ಗ್ರಾಮ ಪಂಚಾಯಿತಿ, ಅಲ್ಲಿ ಗ್ರಾಮೀಣ ಮಟ್ಟದಲ್ಲಿ ಯಾವುದೇ ಒಂದು ಕಾಮಗಾರಿ ಇರಬಹುದು, ಲೋಕೋಪಯೋಗಿ ಇಲಾಖೆ ಕಾಮಗಾರಿ ಇರಬಹುದು ಅಥವಾ ಜಿಲ್ಲಾ ಪಂಚಾಯಿತಿ ಕಾಮಗಾರಿ ಇರಬಹುದು, ರಸ್ತೆ ಕಾಮಗಾರಿ ಅಥವಾ ಕೆರೆಗಳಲ್ಲಿ ಹೂಳು ತೆಗೆಯುವಂತಹ ಕಾಮಗಾರಿ ಇರಬಹುದು, ಸಂಬಂಧಪಟ್ಟ ಗ್ರಾಮ ಪಂಚಾಯಿತಿ ಕಛೇರಿಯ ನೋಟೀಸ್ ಬೋರ್ಡಿನಲ್ಲಿ ಆ ಕಾಮಗಾರಿ ಬಗ್ಗೆ ತಿಳುವಳಿಕೆ ಪತ್ರವನ್ನು ಹಚ್ಚುವಂಥ ಕೆಲಸವನ್ನು ಮಾಡಬೇಕು. ಇವತ್ತು 5 ಲಕ್ಷ ರೂಪಾಯಿಗಳ ಒಂದು ಕೆಲಸ ನಡೆಯುತ್ತದೆ ಅಂದರೆ ಸಾರ್ವಜನಿಕವಾಗಿ ಎಸ್ಟಿಮೇಟ್ ಇಷ್ಟು ಮಾಡಿದ್ದಾರೆ, ಇಂತಹ ಕೆಲಸಗಳು ಆಗುತ್ತವೆಂದು ನಾವು ತಿಳುವಳಿಕೆ ಪತ್ರದಲ್ಲಿ ಸೂಚಿಸಿದರೆ ಜನರಿಗೆ ತಿಳುವಳಿಕೆ ಬರುತ್ತದೆ. ಆಮೇಲೆ ಯಾರು ಕಾಮಗಾರಿ ಕೆಲಸವನ್ನು ತೆಗೆದುಕೊಂಡಿರುತ್ತಾರೋ ಅವರಿಗೂ ಒಂದು ಹೆದರಿಕೆ ಇರುತ್ತದೆ. ಇಂತಹ ಅಂಶಗಳನ್ನು ತಾವು ಇದರಲ್ಲಿ ಸೇರಿಸಿ ಈ ವಿಧೇಯಕವನ್ನು ತಂದರೆ ಒಳ್ಳೆಯದೆಂದು ನಾನು ಸಲಹೆ ಮಾಡುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೇ 1997-98 ಇಸವಿಯಲ್ಲಿ ಶ್ರೀ ಮಾನ್ ಸಿದ್ದರಾಮಯ್ಯನವರು ಹಣಕಾಸಿನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ, ತಮ್ಮ ಬಜೆಟ್ ಭಾಷಣದಲ್ಲಿ, ಈ ವಿಚಾರವನ್ನು ಹೇಳಿದ್ದರು. ಇದಾದ ನಂತರ ಇದನ್ನು ನಾವು ವಿಧಾನ ಪರಿಷತ್ತಿನಲ್ಲಿ ಮಂಡಿಸಿದ್ದೆವು. ಈ ಸಂದರ್ಭದಲ್ಲಿ, ಈಗ ಸರ್ಕಾರ ಈ ವಿಧೇಯಕವನ್ನು ಒಂದು ವರ್ಷದ ನಂತರವಾದರೂ ಈ ವಿಧಾನ ಸಭೆಯಲ್ಲಿ ತಂದಿರತಕ್ಕಂಥಾದ್ದು ಬಹಳ ಸಂತೋಷದ ವಿಚಾರ. ಮಾನ್ಯ ಸಚಿವರಾದ ಶಿವಣ್ಣನವರಿಗೆ ಇಂಡಿಪೆಂಡೆಂಟ್ ಖಾತೆ ಇಲ್ಲ ಅಂತ ನಾನು ತಿಳಿದುಕೊಂಡಿದ್ದೇನೆ, ಅವರಿಗೆ ಇಂಡಿಪೆಂಡೆಂಟ್ ಖಾತೆಯನ್ನು ಕೊಟ್ಟರೆ ಚೆನ್ನಾಗಿ ಕೆಲಸ ಮಾಡುತ್ತಾರೆ, ಈ ಸಚಿವ ಸಂಪುಟದ ಬದಲಾವಣೆಯಲ್ಲಿ ಅದು ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ಹಾಗೋಡು ತಿಮ್ಮಪ್ಪನವರು ನಗುತ್ತಾರೆ ಮತ್ತು ಅಷ್ಟೇ ಸೀರಿಯಸ್ ಆಗಿ ಕೋಪ ಮಾಡಿಕೊಳ್ಳುತ್ತಾರೆ. ಮಾನ್ಯ ಬೈರೇಗೌಡರು ಇದ್ದರೆ ಮಾತ್ರ ಅವರನ್ನು ಕಂಟ್ರೋಲ್ ಮಾಡಬಹುದು ಇಲ್ಲದಿದ್ದರೆ ಆಗುವುದೇ ಇಲ್ಲ. ಈ ಹಣಕಾಸು ಇಲಾಖೆ ಬಹಳ ದೊಡ್ಡ ಇಲಾಖೆ, ಇವರು ಅಧಿಕಾರಕ್ಕೆ ಬಂದು ಒಂದು ವರ್ಷವಾಯಿತು. ಇಂತಹ ಒಂದು ದೊಡ್ಡ ಇಲಾಖೆಗೆ ಸ್ವತಂತ್ರವಾಗಿ ಶಿವಣ್ಣನವರನ್ನೇ ಮಾಡಲಿ, ಹಾಗೋಡು ತಿಮ್ಮಪ್ಪನವರನ್ನೇ ಮಾಡಲಿ, ಮಾನ್ಯ ಚಂದ್ರೇಗೌಡರಿಗೆ ಕೊಡಲಿ, ಮಾನ್ಯ ಖರ್ಗೆಯವರಿಗೆ ಕೊಡಲಿ, ಯಾರಿಗಾದರೂ ಒಬ್ಬರಿಗೆ ಹಣಕಾಸಿನ ಮಂತ್ರಿಯಾಗಿ ಸಂಪೂರ್ಣ ಅಧಿಕಾರವನ್ನು ಕೊಟ್ಟರೆ ಅವರು ಮಾಡಬಹುದು. ಇಲ್ಲದಿದ್ದರೆ ಇದು ಅರಣ್ಯರೋಧನವಾಗುತ್ತಿದೆ. ನಾವು ಮಾತನಾಡತಕ್ಕಂಥಾದ್ದು, ತಾವು ಕ್ಯಾಬಿನೆಟ್‌ನಲ್ಲಿದ್ದೀರಿ ತಾವಾದರೂ ಅದನ್ನು ತಿಳಿದುಕೊಳ್ಳಿ. ಈ ವಿಧೇಯಕದ ಬಗ್ಗೆ ನಾವು ಮಾತನಾಡುವುದನ್ನು ಕ್ಯಾಬಿನೆಟ್‌ನಲ್ಲಿ ತೆಗೆದುಕೊಳ್ಳಿ, ಮಾನ್ಯ ಶಿವಣ್ಣನವರು ಕ್ಯಾಬಿನೆಟ್‌ಗೆ ಹೋಗುವುದಕ್ಕೆ ಆಗದುವುದಿಲ್ಲ ಅಂತ ಹೇಳುವುದಕ್ಕೆ ಅಥವಾ ಅವರನ್ನು ಕ್ಯಾಬಿನೆಟ್ ಸಚಿವರನ್ನಾಗಿ ಮಾಡಿ ಕ್ಯಾಬಿನೆಟ್ ಒಳಗೆ ತೆಗೆದುಕೊಳ್ಳಿ.

ಶ್ರೀ ಎಂ. ಶಿವಣ್ಣ :— ಮಾನ್ಯ ಅಧ್ಯಕ್ಷರೆ ಈ ವಿಚಾರದಲ್ಲಿ ಎಲ್ಲವನ್ನು ಸಂಪೂರ್ಣವಾಗಿ ತಿಳಿದುಕೊಂಡಿದ್ದೇನೆ. ಜೊತೆಗೆ ಇಂತಹ ವಿಚಾರಗಳು ಬಂದಾಗ ತಮಗೆ ಗೊತ್ತಿರುವ ಹಾಗೆ ಸಚಿವ ಸಂಪುಟಕ್ಕೆ ರಾಜ್ಯ ಸಚಿವರನ್ನು ಆಹ್ವಾನ ಮಾಡಿ ಸಭೆಯಲ್ಲಿ ಪ್ರಸ್ತಾಪ ಮಾಡುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ತಮಗೆ ಇಷ್ಟೇ ಅಧಿಕಾರ ಸಾಕು ಅಂತ ಹೇಳುವುದಾದರೆ ಸಂತೋಷ. ನಿಮಗೆ ಇನ್ನೂ ಹೆಚ್ಚಿನ ಅಧಿಕಾರ ಬೇಕು ಎನ್ನುವುದಾದಲ್ಲಿ ನಿಮಗೆ ಶಿಫಾರಸ್ಸು ಮಾಡಿ ಅಂತ ಚಂದ್ರೇಗೌಡರಿಗೆ ಮತ್ತು ಹಾಗೋಡು ತಿಮ್ಮಪ್ಪನವರಿಗೆ ಹೇಳುತ್ತಿದ್ದೇನೆ. ಶಿವಕುಮಾರ್ ಬೇಕಾದರೆ ಆಮೇಲೆ ನಾನು ಹೇಳುತ್ತೇನೆ. ನಾವು ಈ ವಿಧೇಯಕದ ಬಗ್ಗೆ ತಿಳಿದುಕೊಂಡು ಬಂದಿದ್ದೀರಿ, ನಿಮ್ಮ ಬಗ್ಗೆ ನನಗೆ ಮೆಚ್ಚುಗೆ ಇದೆ.

ಈ ಎರಡು ಮೂರು ವಿಚಾರದಲ್ಲಿ ಹಣಕಾಸಿನ ಇಲಾಖೆಗೆ ಸಂಬಂಧಪಟ್ಟಂತೆ ಮಾತನಾಡುವಂತಹ ಸಂದರ್ಭದಲ್ಲಿ ಅವರು ದೊಡ್ಡ ಮಂತ್ರಿಗಳು, ಪಂಡಿತರ ಅಭಿಪ್ರಾಯಗಳನ್ನು ಕೇಳುವುದಕ್ಕೂ ತಯಾರಾಗಿಲ್ಲ. ಅವರ ಬಗ್ಗೆ ನನಗೆ ಬಹಳ ಅಭಿಮಾನ ಇದೆ, ತಾವು ದಯವಿಟ್ಟು ಮನಸ್ಸಿಗೆ ಏನೂ ತಿಳಿದುಕೊಳ್ಳಬೇಡಿ. ನಾನು ತಮಗೆ ಇಷ್ಟೇ ಹೇಳತಕ್ಕಂಥಾದ್ದು ರಾಜ್ಯಕ್ಕೆ ಒಬ್ಬ ಹಣಕಾಸಿನ ಮಂತ್ರಿಗಳು ಬೇಕು, ಈ ಕಂಟ್ರಾಕ್ಟರ್ ಏನು ಮಾಡುತ್ತಾರೆಂದರೆ ಅವರು ಒಂದು ಸಂಘವನ್ನು ಮಾಡಿಕೊಳ್ಳುತ್ತಾರೆ. ಅದರಲ್ಲೂ ವಿಶೇಷವಾಗಿ ಯು.ಕೆ.ಪಿ.ಯಲ್ಲಿ, ಮತ್ತು ಕಾವೇರಿಯಲ್ಲಿ. ಮಾನ್ಯ ನಾಗೇಗೌಡರು ನೀರಾವರಿ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿಯೂ ಸಹ ಅವರು ವ್ಯವಹಾರ ಮಾಡಿಕೊಂಡು ಅವರೊಂದು ರಾಕೇಟ್ ಮಾಡಿಕೊಂಡು ಬ್ಲಾಕ್‌ಮೇಲ್ ಮಾಡುವಂತಾದ್ದು, ತ್ರೆಟನ್ ಮಾಡುವಂತಾದ್ದು, ಟೆಂಡರ್ ಫಾರಮ್ ಸಿಗದೇ ಇರುವಂತೆ ಮಾಡುವಂತಾದ್ದನ್ನು ಮಾಡುತ್ತಾರೆ. ಇದನ್ನು ತಡೆಗಟ್ಟಬೇಕೆಂದು ಈ ವಿಧೇಯಕವನ್ನು ತಾವು ಈ ವಿಧೇಯಕವನ್ನು ಮಾಡುತ್ತಿರುವುದು, ಬಹಳ ಮುಖ್ಯವಾಗಿ ಟೆಂಡರ್ ಫಾರಮ್ ಸಿಗುವುದಿಲ್ಲ, ಅದಕ್ಕೆ ತಾವು ಈ ವಿಧೇಯಕವನ್ನು ತಂದಿದ್ದೀರಿ, ನಾವು ಆಗ ಮಂಡಿಸಿದ್ದೆವು ಬಹಳ ಸಂತೋಷ. ನಾನು ಇನ್ನು ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಿ ನಾನು ಮುಗಿಸುತ್ತೇನೆ. ಇದನ್ನು ಇಂಪ್ಲಿಮೆಂಟ್ ಮಾಡುವಾಗ ತಾವು ಏನು ಧ್ಯೇಯ ಮತ್ತು ಉದ್ದೇಶಗಳನ್ನು ಇಟ್ಟುಕೊಂಡಿದ್ದೀರಿ, ಅದು ಕ್ಲಿಯರ್ ಆಗಬೇಕು. ನಾನು ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಪ್ರವಾಸ ಮಾಡಿದಾಗ ನನಗೆ ತಿಳಿದು ಬಂದಿದ್ದು, ಟೆಂಡರ್ ಹಾಕದೇ ಇರುವಂತೆ ಬೆದರಿಕೆಗಳು ಹೋಗುತ್ತವೆ. ಟೆಂಡರ್ ಹಾಕಿದರೆ ನಿನ್ನ ಕಾಲು ತೆಗೆಯುತ್ತೇನೆ, ನೀನು ಟೆಂಡರ್ ವಾಪಸ್ಸು ತೆಗೆದುಕೊಳ್ಳಬೇಕು ಎನ್ನುವಂತಹ ಬೆದರಿಕೆಗಳು ಹೋಗುತ್ತಿವೆ. ಅದು ಯಾವ ಕಡೆಯಿಂದ ಏನು ಅಂತ ನಾನು ಹೇಳುತ್ತೇನೆ. ರಾಜಕಾರಣಿಗಳಿಂದ ಹೋಗುತ್ತಿದೆ, ಅದನ್ನು ತಪ್ಪಿಸಿ. ಈಗ ನಾನು ಒಂದು ಆರ್ಡರ್ ನೋಡಿದೆ. ಮಾನ್ಯ ಸಚಿವರಾದ ಮಹದೇವ್ ಅವರು ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಮಾನ್ಯ ಮುಖ್ಯ ಸಚೇತಕರು ಅವರನ್ನು ಕರೆಸಿದ್ದರೆ ಅವರ ಎದುರುಗಡೆ ನಾನು ಈ ಆರ್ಡರ್‌ನ್ನು ಓದಬೇಕಾಗಿತ್ತು. ಮಾನ್ಯ ಅಧ್ಯಕ್ಷರೇ ಚಾಮರಾಜನಗರ ಜಿಲ್ಲೆಯ ಜಿಲ್ಲಾಧಿಕಾರಿಗಳು ಒಂದು ಆರ್ಡರ್ ಮಾಡಿದ್ದಾರೆ. ಒಂದು ದೇವಸ್ಥಾನಕ್ಕೆ 14 ಲಕ್ಷ ರೂಪಾಯಿಗಳನ್ನು ಕೊಡಿಸಿದ್ದೇನೆ. ಆ ಜಿಲ್ಲಾಧಿಕಾರಿಗಳು ಮಾಡಿರುವ ಆರ್ಡರ್ ಅದನ್ನು ನಾನು ಹೇಳುತ್ತೇನೆ. ಈ 14 ಲಕ್ಷ ರೂಪಾಯಿಗಳ ಟೆಂಡರ್ ಕೆಲಸಗಳನ್ನು ಬೆಂಗಳೂರು ವಿಜಯಕುಮಾರ್ ಎನ್ನುವವರಿಗೆ ಕೊಡಬೇಕು ಅಂತ ಜಿಲ್ಲಾ ಮಂತ್ರಿಗಳು ಆರ್ಡರ್ ಮಾಡಿದ್ದಾರೆ ಅಂತ ಹೇಳಿ ಸರ್ಕಾರಿ ಆದೇಶ ಮಾಡಿದ್ದಾರೆ. ಏನೋ ಕದ್ದು ಮುಚ್ಚಿ ಮಾಡಿಕೊಂಡು ಹೋದರೆ ಮಾಡಿಕೊಳ್ಳಲಿ ಅಂತ ಸುಮ್ಮನೆ ಇರಬಹುದು. ಆ ಜಿಲ್ಲಾಧಿಕಾರಿ ಮಾನ ಮರ್ಯಾದೆ ಎಲ್ಲಾ ಬಿಟ್ಟುಬಿಟ್ಟು ಈ ರೀತಿ ಆರ್ಡರ್ ಮಾಡಿದರೆ ಇದಕ್ಕೆ ಏನು ಹೇಳುವುದು? ಕೃಷ್ಣಮೂರ್ತಿಯವರು ಇದನ್ನು ಪ್ರಸ್ತಾಪ ಮಾಡಬೇಕೆಂದು ಇದ್ದರು. ಸ್ವತ: ಹೇಳಿದ್ದಾರೆ,

ಜಿಲ್ಲಾ ಮಂತ್ರಿಗಳು ಇಂತಹ ದಿನ ಬಂದಿದ್ದರು, ನಮಗೆ ಹೇಳಿದರು ಅದಕ್ಕೋಸ್ಕರವಾಗಿ ಬೆಂಗಳೂರಿನಲ್ಲಿರತಕ್ಕಂಥ ಇಂತಹ ಗುತ್ತಿಗೆದಾರರಿಗೆ ಈ ಗುತ್ತಿಗೆಯನ್ನು ಕೊಡಬೇಕು ಅಂತ ಹೇಳಿ ನಾನು ಆರ್ಡರ್ ಮಾಡುತ್ತಿದ್ದೇನೆ ಅಂತ ಹೇಳಿ ಸರ್ಕಾರಿ ಆದೇಶವನ್ನು ಹೊರಡಿಸಿದ್ದಾನೆ ಪುಣ್ಯಾತ್ಮ. ಇದನ್ನು ಪಾರದರ್ಶಕತೆ ಅಂತ ಹೇಳುವುದರಲ್ಲಿ ನಮ್ಮದೇನೂ ತಕರಾರು ಇಲ್ಲ ಸ್ವಾಮಿ.

ಶ್ರೀ ಜಿ. ರಾಜುಗೌಡ :— ಮಾನ್ಯ ಅಧ್ಯಕ್ಷರೇ ಸಚಿವರು ಮಾಡತಕ್ಕಂಥ ಆರ್ಡರ್ ಅದು ಸರ್ಕಾರಿ ಆರ್ಡರ್ ಆಗುತ್ತದೆಯೇ?

ಶ್ರೀ ಪಿ.ಜಿ.ಆರ್ ಸಿಂಧ್ಯಾ :— ಜಿಲ್ಲಾಧಿಕಾರಿಗಳು ಮಾಡಿರತಕ್ಕಂಥ ಆರ್ಡರ್ ಸರ್ಕಾರಿ ಆರ್ಡರ್ ಅಲ್ಲವೋ ಹೇಳಿ? ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಿಗೆ ಆರ್ಡರ್ ಹಾಪಿಯನ್ನು ಕಳುಹಿಸಿಕೊಡಿ.

ಶ್ರೀ ಭಾರತೀ ಶಂಕರ್ :— ಸರ್ಕಾರಿ ನೌಕರರು ದಡ್ಡರು ಎನ್ನುವ ಭಾವನೆಯಿಂದ ತಾವು ಹೇಳುತ್ತಿದ್ದೀರಿ, ಆದರೆ ಅವರು ಬಹಳ ಬುದ್ಧಿವಂತರು.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ಕಾಗೋಡು ತಿಮ್ಮಪ್ಪನವರೇ ತಮ್ಮ ಸರ್ಕಾರದಲ್ಲಿ ಪಾರದರ್ಶಕತೆ ಇದೆ ಅಂತ ಹೇಳಿದಿರಲ್ಲ, ಅದಕ್ಕೆ ಇಂತಹ ಕೆಲವು ತುಣುಕುಗಳನ್ನು ತಮ್ಮ ಗಮನಕ್ಕೆ ತಂದರೆ ತಾವು ಎಚ್ಚರಿಕೆಯಿಂದ ಅದರ ಮೇಲೆ ಬಿಗಿಯಾದ ಕ್ರಮ ತೆಗೆದುಕೊಂಡು ಅವರಿಗೆಲ್ಲಾ ಬುದ್ಧಿ ಕಲಿಸಬಹುದು ಅಂತ ಹೇಳಿ ಆ ಬಗ್ಗೆ ತಮಗೆ ಜ್ಞಾನೋದಯವಾಗಿ ಪಾರದರ್ಶಕತೆಯ ಮಸೂದೆ ತಂದಿರುವುದಕ್ಕೆ ಉದಾಹರಣೆ ಕೊಟ್ಟೆ ಅಷ್ಟೇ. ಇದನ್ನು ಬೇಗ ಮಾಡಿಬಿಟ್ಟಿದ್ದರೆ ಆ ಜಿಲ್ಲಾಧಿಕಾರಿಯನ್ನು ಜೈಲಿಗೆ ಹಾಕಿಸಬಹುದಿತ್ತು.

ಶ್ರೀ ಕಾಗೋಡು ತಿಮ್ಮಪ್ಪ :— ನೀವೇ ಮಾಡಿ ಹೋಗಬಹುದಿತ್ತಲ್ಲ; ನೀವು ಏಕೆ ಆರ್ಡಿನೆನ್ಸ್ ತಿಂದಿರಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ನಾವು ಮಾಡುವಷ್ಟರಲ್ಲಿ ನಮ್ಮ ಸರ್ಕಾರ ಹೋಯಿತು. ನಿಮ್ಮ ಜಿಲ್ಲಾಧಿಕಾರಿ ಮಾಡಿರುವುದೇ ಪಾರದರ್ಶಕತೆ ಅಂತ ತಾವು ಒಪ್ಪಿಕೊಳ್ಳುವುದಾದರೆ ನಮ್ಮದೇನೂ ತಕರಾರು ಇಲ್ಲ. 14 ಲಕ್ಷ ರೂಪಾಯಿಗಳ ಕೆಲಸವನ್ನು ಬೆಂಗಳೂರಿನಲ್ಲಿರತಕ್ಕಂಥ ಒಬ್ಬ ಕಂಟ್ರಾಕ್ಟರ್‌ಗೆ ಕೊಟ್ಟಿದ್ದಾರೆ. ಹಾವೇರಿಯಲ್ಲಿ ಕುಡಿಯುವ ನೀರಿನ ಬಾವಿಗಳಿಗೆ ಜಿಲ್ಲಾಧಿಕಾರಿಗಳು ಒಂದು ಆರ್ಡರ್ ಮಾಡಿದ್ದಾರೆ. ನಾನು ಆ ಬಗ್ಗೆ ಸಿ.ಓ.ಡಿ ವಿಚಾರಣೆಗೆ ಒತ್ತಾಯ ಮಾಡುತ್ತೇನೆ. ಗದಗ್‌ನಲ್ಲಿ, ಬೋರ್‌ವೆಲ್‌ಗಳನ್ನು ತೋಡಿಸಿದ್ದಾರೆ ಒಂದು ಅಡಿಗೆ 40 ರೂಪಾಯಿ. ಆದೇ ಹಾವೇರಿಯಲ್ಲಿ, 85 ರೂಪಾಯಿ ಒಂದು ಅಡಿಗೆ.

ಆದರೆ ಸರ್ಕಾರದ ಆಡಳಿತ ಯಂತ್ರದಲ್ಲಿರತಕ್ಕಂಥ ನ್ಯೂನತೆಗಳನ್ನು ನಾನು ಸದನದ ಗಮನಕ್ಕೆ ತರದಿದ್ದರೆ ನಾವು ಇದ್ದೂ ಏನು ಪ್ರಯೋಜನ? ಅದಕ್ಕೋಸ್ಕರ ನಾನು ಹೇಳುತ್ತಿದ್ದೇನೆ, ಈ ರೀತಿಯ ವ್ಯವಹಾರಗಳು ಬಹಳ ನಡೆಯುತ್ತಿವೆ, ಇದಕ್ಕೆ ಯಾರ ಕುಮ್ಮಕ್ಕು ಇದೆ? ಮಾನ್ಯ ಹಣಕಾಸಿನ ಮಂತ್ರಿಗಳು ಮೂರುವರೆ ಕೋಟಿ ರೂಪಾಯಿಗಳನ್ನು ಕೊಟ್ಟರೆ ಹೇಗೆ? ಟೆಂಡರ್ ಕರೆದಿಲ್ಲ. ಟೆಂಡರ್ ಕರೆಯಬೇಕೆಂದು ಹೇಳಿ ಶಾಸ್ತ್ರಕ್ಕೆ ಟೆಂಡರ್ ಕರೆಸಿದರು. ಆ ಟೆಂಡರ್‌ನಲ್ಲಿ 40 ರೂಪಾಯಿ ಹಾಕಿದ್ದವರನ್ನು ಬಿಟ್ಟುಬಿಟ್ಟರು. ಅಲ್ಲಿಯ ಗೌರವಾನ್ವಿತ ಶಾಸಕರು ರೈತ ಹೋರಾಟಗಾರ.

8. ಪಿ.ಎಂ.

ಶ್ರೀ ಕೋಗೊಡು ತಿಮ್ಮಪ್ಪ :— ಮಾನ್ಯ ಸಿಂಧ್ಯಾರವರು ಮುಂತಾಗಿ ಸಚಿವರಾಗಿ ಇಲ್ಲಿ ಕೆಲಸ ಮಾಡಿದವರು. ಈಗ ನಮ್ಮ ಮುಂದೆ ಮಸೂದೆಯು ಚರ್ಚೆಗಾಗಿ ಇದೆ. ನಾವುಗಳು ಆ ಕುರಿತು ಕಾರ್ಯಕಲಾಪಗಳನ್ನು ಮಾಡಿದರೆ ಅದಕ್ಕೆ ಅರ್ಥ ಬರುತ್ತದೆ....

ಶ್ರೀ ಲಮಾಣಿ ರುದ್ರಪ್ಪ ಮಾನಪ್ಪ :— ಹಾವೇರಿ ಜಿಲ್ಲೆಯ ಪ್ರದೇಶದಲ್ಲಿ ಸವಣೂರಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಭೀಕರವಾಗಿ ಜನರು ಬೆಂಕಿ ಹಚ್ಚಿ ಬಸ್‌ಗಳನ್ನು ಸುಟ್ಟರು. ಬಂದ್ ಇತ್ಯಾದಿಗಳನ್ನು ಮಾಡಿ ತಮ್ಮ ಅಸಮಾಧಾನವನ್ನು ವ್ಯಕ್ತಮಾಡಿದರು. ಇದನ್ನು ಪರಿಗಣಿಸಿ ಸರಕಾರದವರು ಸೂಕ್ತ ರೀತಿಯಲ್ಲಿ ಟೆಂಡರ್ ಕರೆದು ರಾತ್ರೋರಾತ್ರಿ ಬೋರ್‌ವೆಲ್‌ಗಳನ್ನು ಕೊರೆಯುವಂಥ ಪರಿಸ್ಥಿತಿ ಬಂದಾಗ ಅದನ್ನು ಸರಕಾರದ ರೇಟ್ ಪ್ರಕಾರವೇ ಹಗಲು ರಾತ್ರಿ 40-50 ಬೋರ್‌ವೆಲ್‌ಗಳನ್ನು ತೆಗೆಯಿಸಿದ್ದಾರೆ.

ಶ್ರೀ ಪಿ.ಜಿ.ಆರ್ ಸಿಂಧ್ಯ :— ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯವನ್ನು ಹೇಳಿದ್ದಾರೆ. ಅಲ್ಲಿ ಬೋರ್‌ವೆಲ್ ವಿಚಾರದಲ್ಲಿ ಏನು ಅವ್ಯವಹಾರವಾಗಿದೆ ಆ ಬಗ್ಗೆ ತನಿಖೆಯಾಗಬೇಕು ಎಂಬುದು ನಮ್ಮ ಎತ್ತಾಯವಾಗಿದೆ. ಆ ಬಗ್ಗೆ ಸೂಕ್ತ ತನಿಖೆ ನಡೆಸಿ, ಅವ್ಯವಹಾರವಾಗಿದ್ದಲ್ಲಿ ತಪ್ಪಿತಸ್ಥರ ಮೇಲೆ ಸೂಕ್ತ ಕ್ರಮ ಜರುಗಿಸುವುದು ಅತ್ಯಗತ್ಯ ಎಂದು ಹೇಳಬಯಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಸನ್ಮಾನ್ಯ ಅಧ್ಯಕ್ಷರೇ, ನಾನು ಈ ವಿಧೇಯಕವನ್ನು ಸ್ವಾಗತಿಸುತ್ತಾ ಕೆಲವೊಂದು ವಿಚಾರಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಟೆಂಡರ್ ಫಾರ್ಮ್ ವ್ಯವಸ್ಥೆ ಬಗ್ಗೆ, ಮತ್ತಿತರ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ. ಆ ವಿಧೇಯಕವು ಹಲವಾರು ದೃಷ್ಟಿಗಳಲ್ಲಿ ಅಪೂರ್ಣವಾಗಿದೆ ಎಂದು ನಾನು ಭಾವಿಸುತ್ತೇನೆ. ಇದನ್ನು ಪರಿಪೂರ್ಣವಾಗಿ ತರುವಂಥ ಅವಶ್ಯಕತೆ ಇದೆಯೆಂದು ನಾನು ಅಭಿಪ್ರಾಯ ಪಡುತ್ತೇನೆ. ನಮ್ಮ ನಮ್ಮ ಕ್ಷೇತ್ರದಲ್ಲಿ ಬೇರೆ ಬೇರೆ ಕೆಲಸಗಳಿಗಾಗಿ ಟೆಂಡರ್ ಎಂದು

ಆಗುತ್ತದೆ. ನಾನು ಇಲ್ಲಿಗೆ ಆರಿಸಿ ಬಂದು ಒಂದು ವರ್ಷದೊಳಗಾಗಿ ನಾಲ್ಕೈದು ಕೆಲಸಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಸರಕಾರದವರನೆಲ್ಲಾ ಕರೆದುಕೊಂಡು ಹೋಗಿ ಅಡಿಗಲ್ಲನ್ನು ಹಾಕಿಸಿದ್ದೇವೆ. ಆದರೆ ಇದು ತನಕವೂ ಕೆಲಸಗಳು ಮುಗಿದಿಲ್ಲ. ಟೆಂಡರ್, ಟೆಂಡರ್ ಫಾರ್ಮ್ ಇತ್ಯಾದಿಗಳು ಒಂದು ಭಾಗವಾದರೆ ಮುಂದಿನ ಭಾಗವನ್ನು ಯಾರು ಹೇಳುವವು ಕೇಳುವರು? ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ ದೊಡ್ಡ ಹಾನಿಯಾಗುತ್ತಾ ಇದೆ. ವಿಳಂಬವಾದಷ್ಟು ಹಣ ಹೆಚ್ಚಾಗುತ್ತದೆ, ಅದನ್ನು ಸಂಬಂಧಪಟ್ಟವರು ಕ್ಲೈಮ್ ಮಾಡುವುದಕ್ಕೆ ಎಲ್ಲಾ ಅವಕಾಶಗಳು ಇವೆ. ಹೀಗೆ ದರಗಳು ಏರುತ್ತಾ ಇರುವ ದಿವಸಗಳಲ್ಲಿ ಟೆಂಡರ್ ಕ್ಲಾಸ್‌ಗಳನ್ನು ಸರಿಯಾದ ರೀತಿಯಲ್ಲಿ ಇಂಪ್ಲಿಮೆಂಟ್ ಮಾಡುವ ಬಗ್ಗೆ ಯಾವುದಾದರೂ ಕಾನೂನನ್ನು, ಒಂದು ಬಿಗಿತನವನ್ನು ತರದೇ ಹೋದರೆ ನಮ್ಮ ಆದಾಯವು ವರ್ಷವರ್ಷ ಬರುವ ಎಕ್ಸ್‌ಕಲೇಷನ್‌ಗೆ ಸರಿಹೋಗುತ್ತದೆ. ಆ ದೃಷ್ಟಿಯಲ್ಲಿ ಇದು ಪರಿಪೂರ್ಣವಾಗಿಲ್ಲ ಎಂದು ನಾನು ಭಾವಿಸುತ್ತೇನೆ. ಇದನ್ನು ಪರಿಪೂರ್ಣವಾಗಿ ಮಾಡಲು ಸರಕಾರವು ಯೋಚನೆ ಮಾಡಬೇಕು. ಟೆಂಡರ್ ವ್ಯವಸ್ಥೆಯು ಹೇಗಿರಬೇಕು? ಫಾರ್ಮ್ ಕೊಡುವುದು ಯಾರಿಗೋ ಟೆಂಡರ್ ಆಗುವುದು, ಅದನ್ನು ರಿಂಗ್ ಮಾಡುವುದು ಮುಂತಾದ ವ್ಯವಸ್ಥೆಗಳು ಇದೆಯಲ್ಲ? ಅಲ್ಲಿ ಯಾರೇ ರಿಂಗ್ ಮಾಡಿಕೊಂಡರೂ ಮುಂದೆ ಕೆಲಸಗಳು ಹೇಗೆ ಮುಂದುವರಿಯಬೇಕು, ಅದರಲ್ಲಿ ಅವರಿಗೆ ಎಲ್ಲಿಯೂ ಲೂಪ್‌ಹೋಲ್ಸ್ ಸಿಕ್ಕಬಾರದು. ಇಲ್ಲಿ ಸಣ್ಣ ಸಣ್ಣ ಟೆಕ್ನಿಕಲ್ ಅಡ್ಜಸ್ಟ್‌ಮೆಂಟ್ ವಿಚಾರಗಳನ್ನು ಸಾಂಕ್ಷನ್‌ಗೆ ಸಂಬಂಧಪಟ್ಟ ನಾನಾ ಅಡಚಣೆಗಳನ್ನು ತೆಗೆದುಕೊಳ್ಳುವುದರೊಳಗೆ ಅವನು ಅದಕ್ಕಾಗಿ ಎಲ್ಲಿಯೋ ಒಂದು ದಾರಿಯನ್ನು ಹುಡುಕಿಕೊಂಡಿರುತ್ತಾನೆ. ಈ ಕಾರಣದಿಂದ ಈ ಟೆಂಡರ್ ಕೆಲಸವನ್ನು ನನಗೆ ಇಷ್ಟು ದಿನಗಳಲ್ಲಿ ಮಾಡಲಿಕ್ಕಾಗಲಿಲ್ಲ, ಆದ್ದರಿಂದ ಈ ವರ್ಷದಲ್ಲಿ, ನಾನು ಆ ಕೆಲಸವನ್ನು ಮುಗಿಸಬೇಕಾದರೆ ನನಗೆ ಇಷ್ಟು ಮೊತ್ತದ ಹಣವನ್ನು ಹೆಚ್ಚುವರಿಯಾಗಿ ಕೊಡಬೇಕು ಎಂದು ಸರಕಾರಕ್ಕೆ ಅರ್ಜಿ ಹಾಕುತ್ತಾನೆ. ಇದು ನಡೆಯುತ್ತಿರುವ ವಿಚಾರ. ಎಲ್ಲರ ಅನುಭವಕ್ಕೂ ಇದು ಬಂದಿದೆ ಎಂದು ನಾನು ಅಂದುಕೊಳ್ಳುತ್ತೇನೆ. ಕಾಮಗಾರಿ ಯಾವುದೇ ಆಗಿರಬಹುದು, ಅದು ಯುಕೆಪಿ ಆಗಿರಬಹುದು, ಇನ್ನಾವುದೇ ಆಗಬಹುದು. ಅದು ಪರಿಪೂರ್ಣವಾಗಿ ಜಾರಿಗೊಳ್ಳಬೇಕಾದರೆ ಈ ವಿಧೇಯಕವು ಅರ್ಥ ಇದೆ. ಅದನ್ನು ಪೂರ್ಣ ರೀತಿಯಲ್ಲಿ ಮಾಡಬೇಕು. ಟೆಂಡರ್ ಕ್ಲಾಸ್‌ಗಳನ್ನು ಅವನು ಸರಿಯಾಗಿ ಅನುಷ್ಠಾನ ಗೊಳಿಸುವುದಕ್ಕೆ ಕಾನೂನು ರಿತ್ಯಾ ಕ್ರಮಗಳನ್ನು ಅಳವಡಿಸಲು ಸರಕಾರ ಯೋಚಿಸಬೇಕು. ಮುಂದಿನ ದಿನಗಳಲ್ಲಿ ಅವುಗಳನ್ನು ಸೇರ್ಪಡೆ ಮಾಡಬೇಕೆಂಬ ಆಗ್ರಹವನ್ನು ನಾನು ಮಾಡಬಯಸುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) :— ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಟೆಂಡರ್ ಫಾರ್ಮಾಲಿಟಿಗಳ ಬಗ್ಗೆ ಜಾರಿಗೆ ಕೊಡುವುದನ್ನು ತಿದ್ದುಪಡಿ ಮಸೂದೆಯ ಮೂಲಕ ತಂದಿದ್ದಾರೆ. ಟೆಂಡರ್ ಕಾಮಗಾರಿಗಳ ಬಗ್ಗೆ ಮಾನ್ಯ ವಿಶ್ವೇಶ್ವರ ಹೆಗಡೆಯವರು

ಸಾಕಷ್ಟು ಹೇಳಿದ್ದಾರೆ. ಅನೇಕ ಕಡೆಗಳಲ್ಲಿ ಟೆಂಡರ್‌ಗಳನ್ನು ಕರೆದ ಬಗ್ಗೆ ತಮ್ಮ ಗಮನಕ್ಕೆ ಕೆಲವು ವಿಚಾರಗಳನ್ನು ತರಬಯಸುತ್ತೇನೆ. ಅಡ್ಮಿನಿಸ್ಟ್ರೇಶನ್ ಸ್ಯಾಂಕ್ಷನ್ ಆಗಿದೆ, ಟೆಕ್ನಿಕಲ್ ಆಗಿದೆ, ಎಂಬಿತ್ಯಾದಿಗಳನ್ನು ಹೇಳಿಕೊಂಡು ಬಂದರೂ ಕೂಡ ಯಾವ ಫಾರ್ಮಾಲಿಟಿಗಳು ಆಗದೇ ಟೆಂಡರ್ ಕೊಟ್ಟಿರುವುದು ಬೇಕಾದಷ್ಟು ಇದೆ. ಟೆಂಡರ್‌ಗಳ ವಿಚಾರದಲ್ಲಿ ನಿಗದಿ ಮಾಡಲ್ಪಟ್ಟ ನಿಯಮಗಳನ್ನು ಪಾಲಿಸುವುದು ಬಹಳ ಮುಖ್ಯವಾದ ವಿಚಾರ. ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಒಂದು ಮಾಫಿಯಾವೇ ಇದೆ. ಅದನ್ನು ಟೆಂಡರ್ ಮಾಫಿಯಾ ಎಂದು ಕರೆಯಬೇಕಾಗುತ್ತದೆ. ಅವರುಗಳು ಬೇರೆ ಬೇರೆಯವರು ಹೆಸರಿನಲ್ಲಿ ಟೆಂಡರ್‌ಗಳನ್ನು ಹಾಕುವಂಥಾದ್ದ ಆಥವಾ ಬೇರೆಯವರು ಭಾಗವಹಿಸದೇ ಇರುವಂತೆ ತೊಂದರೆ ಕೊಡುವಂಥಾದ್ದು ಮುಂತಾಗಿ ನಡೆಯುತ್ತಿರುತ್ತದೆ. ಒಂದು ರೀತಿಯಲ್ಲಿ ಸುಪಾರಿ ಕೊಲೆಗಳ ತರಹದಲ್ಲಿ ಇಲ್ಲಿ ವರ್ತಿಸುತ್ತಾರೆ. ಮಾನ್ಯ ಶ್ರೀನಿವಾಸಗೌಡರು ಮಾತನಾಡುವಾಗ ಉತ್ತರ ಭಾರತದ ಗೋರಖ್‌ಪುರ ಮುಂತಾದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಹಾಗೆ ನಮ್ಮಲ್ಲಿ ಅನೇಕ ಕಡೆಗಳಲ್ಲಿ ಇದು ನಡೆಯುತ್ತಿದೆ. ನಿರ್ದಿಷ್ಟವಾಗಿ ಕೆಲವರನ್ನು ಬಿಟ್ಟು ಬೇರೆಯವರು ಟೆಂಡರ್ ಹಾಕಿದರೆ ಅವರಿಗೆ ಬೆದರಿಕೆ ಹಾಕುವುದು, ಒತ್ತಡ ಹಾಕಿ ಅವರಿಗೆ ಅವಕಾಶ ಸಿಗದ ಹಾಗೆ ನೋಡಿಕೊಳ್ಳುವುದು ಇದೆ. ಅದಕ್ಕೆ ಟೆಂಡರ್ ಮಾಫಿಯಾ ಎಂದು ಕರೆಯಬೇಕಾಗುತ್ತದೆ. ಒಂದು ವೇಳೆ ಬೇರೆಯವರಿಗೆ ಸಿಕ್ಕರೂ ಕೆಲಸ ಮುಂದುವರಿಯದ ಹಾಗೆ ಮಾಡುವುದು. ಇಂಥ ಅನೇಕ ತರಹದ ಉದಾಹರಣೆಗಳನ್ನು ಬೆಂಗಳೂರು ಪ್ರದೇಶದಲ್ಲಿ ಟೆಂಡರ್ ವರ್ಕ್ಸ್ ನಡೆಯುತ್ತಿರುವುದನ್ನು ನಾವೆಲ್ಲರೂ ನೋಡುತ್ತಿದ್ದೇವೆ ಎಲ್ ಅಂಡ್ ಟಿ ಯವರು ತೆಗೆದುಕೊಂಡ ಫ್ಲೈಓವರ್ ಒಂದನ್ನು ಬಿಟ್ಟು ಬೇರೆಯವರನ್ನು ನೋಡಿದರೆ ಗೊತ್ತಾಗುತ್ತದೆ. ನಾಗಾರ್ಜುನ ಕಂಪನಿಯವರು ತೆಗೆದುಕೊಂಡ ಫ್ಲೈಓವರ್‌ಗಳ ಕೆಲಸ ನಡೆದಿಲ್ಲ. 3-4 ವರ್ಷಗಳಿಂದ ಜನರು ಸಫರ್ ಆಗುತ್ತಿದ್ದಾರೆ. ಅಂಥ ಕೆಲಸಗಳು ಇಷ್ಟು ದಿನಗಳಲ್ಲಿ ಮುಗಿಯಬೇಕು, ಟೆಂಡರ್‌ದಾರರ ಅರ್ಹತೆಗಳು ಏನು? ಟೆಂಡರ್‌ದಾರರ ಹಣಕಾಸಿನ ಸಾಮರ್ಥ್ಯ ಏನು? ಎಂಬಿತ್ಯಾದಿಗಳನ್ನು ನೋಡಿ ಕೊಡುವುದಿಲ್ಲವೇ? ಈಗ ನಾವು ಕೊಡುವಂಥ ಮುಂಗಡ ಹಣದಿಂದ ಪ್ರಾರಂಭ ಮಾಡುವುದು, ಅವರಿಗೆ ಬೇಕಾದ ಹಾಗೆ ಎಲ್ಲೆಂದರಲ್ಲಿ ಕೆಲಸವನ್ನು ನಿಲ್ಲಿಸಿಬಿಟ್ಟು ಹೋಗುವುದು ಮಾಡುತ್ತಿದ್ದಾರೆ. ನಮ್ಮ ಅತ್ತಿಬೆಲೆಯಿಂದ ದಾಬಸ್‌ಪೇಟೆ ರೋಡ್‌ನ್ನು 33 ಕೋಟಿಗಳಿಗೆ ಟೆಂಡರ್ ಕೊಟ್ಟರು. ಆದರೆ ಕೆಲಸವನ್ನು ಟೆಂಡರ್‌ದಾರ ಅರ್ಧಕ್ಕೆ ಬಿಟ್ಟು ಹೋಗಿದ್ದಾನೆ. ಆಂಧ್ರಪ್ರದೇಶದ ಆ ಕಾಂಟ್ರಾಕ್ಟರ್‌ನ್ನು ನಾವು ಎಲ್ಲಿ ಹುಡಿಕಿಕೊಂಡು ಹೋಗುವುದು? ಈಆ ಕೆಲಸವನ್ನು ಮುಂದುವರಿಸಿಕೊಂಡು ಹೋಗುವುದು ಯಾರು? ಆದ್ದರಿಂದ ಈ ರೀತಿಯಾಗಿ ಟೆಂಡರ್ಸ್ ಕರೆದರೆ ಅದರ ಪರಿಣಾಮ ಏನಾಗುತ್ತದೆ ಎಂಬುದನ್ನು ಕೂಡ ನೋಡಬೇಕು. ಮೊದಲು ಟೆಂಡರ್ ತೆಗೆದುಕೊಂಡು ಅನಂತರ ತಮಗೆ ಬೇಕಾದವರಿಗೇ ಸಬ್ ಕಾಂಟ್ರಾಕ್ಟ್ ಕೊಡುತ್ತಾರೆ.

ಲೋಕಲ್‌ನವರಿಗೆ ರೋಡ್ ವೈಡ್‌ನಿಂಗ್ ವರ್ಕ್ಸ್, ಜಲ್ಲಿ ಹಾಕುವ ವರ್ಕ್ಸ್ ಮುಂತಾಗಿ ಕೊಡುತ್ತಾರೆ. ಅದಕ್ಕೆ ಯಾವ ಸ್ಟ್ಯಾಂಡರ್ಡ್ ಕೂಡ ಇರುವುದಿಲ್ಲ. ನ್ಯಾಶನಲ್ ಹೈವೇ ಸ್ಟ್ಯಾಂಡರ್ಡ್ ಎನ್ನುತ್ತಾರೆ ಹೊರತಾಗಿ ಅಲ್ಲಿ ಯಾವ ಸ್ಟ್ಯಾಂಡರ್ಡ್ ಕೂಡ ಇರುವುದಿಲ್ಲ. ಅದ್ದರಿಂದ ಟೆಂಡರ್‌ಗಳನ್ನು ಕೊಡುವಾಗ ಟೆಂಡರ್‌ದಾರರ ಪೂರ್ವಪರವನ್ನು ನೋಡಬೇಕು. ಅವರ ಅರ್ಹತೆ, ಆರ್ಥಿಕ ಸ್ಥಿತಿಗತಿ, ಅವರ ಕಂಪನಿಯ ಇತಿಹಾಸ, ಅವರ ಕಾರ್ಯವೈಖರಿ, ಮುಂತಾದವುಗಳನ್ನು ನೋಡಬೇಕು. ತಾವು ಅದಕ್ಕಾಗಿ ನೇಮಕಾತಿ ಪ್ರಾಧಿಕಾರ ಎಂದು ಮಾಡಿದ್ದೀರಿ. ಯಾರಿಗೆ ತಾವು ಟೆಂಡರ್ ಬುಲೆಟಿನ್ ಕೊಡಬೇಕು ಮುಂತಾದ ವಿಚಾರಗಳ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ.

ಶ್ರೀ ಕೆ. ಷಡಾಕ್ಷರಿ :— ಮಾನ್ಯ ಬಚ್ಚೇಗೌಡರ ಕಾಲದಲ್ಲಿ ತಂದಿರುವಂಥ ಬಿಲ್ ಇದು. ತಾವುಗಳು ಕೂಡ ಅದರಲ್ಲಿ ಇದ್ದೀರಿ.

ಶ್ರೀ ಎ. ಕೃಷ್ಣಪ್ಪ :— ತಾವುಗಳು ಹೇಳುವ ಟರ್ಮ್ಸ್ ಆಫ್ ಕಾಂಟ್ರಾಕ್ಟ್ ಎಕ್ಸಿಕ್ಯೂಷನ್‌ನಲ್ಲಿ ಬರುತ್ತದೆ. ಇದನ್ನು ಪ್ರತ್ಯೇಕವಾಗಿ ಮತ್ತು ಸ್ವತಂತ್ರವಾಗಿ ಡೀಲ್ ಮಾಡಬೇಕಾಗುತ್ತದೆ. ಅದರಲ್ಲಿ ಸಮಯ ನಿಗದಿಪಡಿಸುವುದು, ಕ್ವಾಲಿಟಿ ಬಗ್ಗೆ ಕರಾರುಗಳು ಮುಂತಾಗಿ ಬರುತ್ತವೆ. ಇವುಗಳು ಎರಡನೇ ಭಾಗದಲ್ಲಿ ಬರುತ್ತವೆ.

ಶ್ರೀ ಬಿ.ಎನ್. ಬಚ್ಚೇಗೌಡ :— ಇಲ್ಲಿ ಟೆಂಡರ್ ಬುಲೆಟಿನ್ ಕೊಡುವುದು. ಟೆಂಡರ್ ಫಾರ್ಮ್‌ಗಳು ಕೆಲಸದ ಕೈಗೆ ಸಿಕ್ಕುವುದು, ಕೆಲವರಷ್ಟೇ ಟೆಂಡರ್ ಹಾಕುವುದು, ಇದನ್ನು ಪಾರದರ್ಶಕವಾಗಿ ಮಾಡಬೇಕು, ಜಿಲ್ಲಾ ಮಟ್ಟದಲ್ಲಿ ಮಾಡಬೇಕು, ಎಲ್ಲರಿಗೂ ಅವಕಾಶಗಳು ಸಿಗುವ ಹಾಗೆ ಆಗಬೇಕು, ಎಂದು ಈ ಬಿಲ್‌ನ್ನು ತಂದು ವ್ಯವಸ್ಥೆ ಮಾಡಲು ಹೊರಟಿದ್ದೀರಿ. ಹೀಗೆ ಮಾಡುವಾಗ ಕೆಲವು ಸೂಕ್ತ ನಿಯಮಗಳನ್ನು ಹಾಕಿ ನಿಯಂತ್ರಣ ಮಾಡುವುದು ಅತೀ ಮುಖ್ಯವಾಗಿ ಆಗಬೇಕಾಗಿದೆ. ಇಲ್ಲವಾದರೆ ವರ್ಕ್‌ಗಳು ಸಫರ್ ಆಗುತ್ತವೆ. ಈ ಬಗ್ಗೆ ನಮಗೂ ನಿಮಗೂ ಅನುಭವವಾಗಿದೆ. ಎಷ್ಟೆಂದರೆ ಅಷ್ಟು ಮಾಡಿ ಅಲ್ಲಿಗೇ ಕೆಲಸ ಬಿಟ್ಟು ಹೋಗಿರುವುದು ಸಾಕಷ್ಟು ಇದೆ. ತದನಂತರ ಅವನು ಕೋರ್ಟಿಗೆ ಹೋಗುತ್ತಾನೆ, ಕ್ಲೈಮ್‌ಗೆ ಹೋಗುತ್ತಾನೆ. ಆದ್ದರಿಂದ ಅಂಥ ವಿಷಯಗಳಿಗೆ ಅವಕಾಶ ಕೊಡದ ಹಾಗೆ ಕಡಿವಾಣ ಹಾಕುವ ವ್ಯವಸ್ಥೆ ಮಾಡಬೇಕು. ಅರ್ಧಂಬರ್ಧ ಕೆಲಸ ಮಾಡಿದ ಟೆಂಡರ್‌ದಾರರನ್ನು ನಾವು ತೆಗೆಯಬೇಕಾದರೆ ವರ್ಷಗಟ್ಟಲೆಯಾಗುತ್ತದೆ. ಅದಕ್ಕೆ ತುಂಬಾ ಫಾರ್ಮ್ಯಾಲಿಟೀಸ್‌ಗಳು ಇವೆ. ಕೋರ್ಟ್‌ಗೆ ಹೋಗಿ ಹತ್ತಾರು ವರ್ಷ ಅವರ ಜೊತೆಗೆ ಫೈಟ್ ಮಾಡಬೇಕು. ಅಷ್ಟು ಹೊತ್ತಿಗೆ ತೆಗೆದುಕೊಂಡ ಯೋಜನೆಯ ಎಕ್ಸ್‌ಕಲೇಶನ್ ತುಂಬಾ ಹೆಚ್ಚಾಗಿ ಹೋಗುತ್ತಿರುತ್ತದೆ. ಹಾಗೆ ಅರ್ಧಗೊಂಡ ಯೋಜನೆಯ, ಸ್ಕೀಮ್‌ಗಳ ಕಾಸ್ಟ್ ಒಂದಕ್ಕೆ ಎರಡರಷ್ಟಾಗುತ್ತದೆ. ಆಗ ಮತ್ತೆ ಟೆಂಡರ್‌ದಾರ ಅಂದಾಜು

ಮಾಡಿದ ಮೊತ್ತಕ್ಕೆ ಇಷ್ಟು ಸೇರಿಸಿಕೊಡಿ ಎಂದು ಕೇಳಿಕೊಳ್ಳುತ್ತಾನೆ. ಹಾಗೆ ಹೆಚ್ಚಿಗೆ ಕೊಡಲು ಆಗುವುದಿಲ್ಲ. ಇಂಥ ಬಹಳಷ್ಟು ವಿಚಾರಗಳನ್ನು ಇದರಲ್ಲಿ, ಆಳವಡಿಸಬೇಕು. ಈ ಕುರಿತು ತಮಗೂ ತುಂಬಾ ಅನುಭವ ಇದೆ. ಎಲ್ಲರೂ ತಮ್ಮ ತಮ್ಮ ಜಿಲ್ಲೆಗಳಲ್ಲಿ ಆದ ಅನುಭವವನ್ನು ಮನಗಂಡಿದ್ದಾರೆ. ಇನು ಮುಂದಾದರೂ ಈ ರೀತಿಯಾಗಿ ಆಗದೇ ಇರುವಂತೆ ನೋಡಬೇಕಾದುದು ಅವಶ್ಯ. ಇವತ್ತು ನಮ್ಮಲ್ಲಿ ಎಂಪಿ ಗ್ರ್ಯಾಂಟ್ ಬರುತ್ತಾ ಇದೆ. ಅದನ್ನು ಅವರು ಯಾರಿಗೆ ಬೇಕೋ ಅವರಿಗೆ ಕೊಡುವುದು ಆಗಿದೆ. ಅದಕ್ಕೆ ಯಾವ ಟೆಂಡರ್ ಇತ್ಯಾದಿಗಳು ಇಲ್ಲ. ಬರೇ ಏಜೆಂಟ್‌ಗಳಿಗೆ ಅವರಿಗೆ, ಇವರಿಗೆ ಎಂದು ಕೊಡುತ್ತಿರುತ್ತಾರೆ. ನಮ್ಮ ಕ್ಷೇತ್ರದ ವಿಚಾರ ಕೂಡ ನಮಗೆ ಗೊತ್ತಾಗುವುದಿಲ್ಲ. ನಮ್ಮ ಕ್ಷೇತ್ರಗಳಲ್ಲಿ ಆಗುವ ಕೆಲಸಗಳ ಬಗ್ಗೆಯೂ ಎಷ್ಟು ಅಮೌಂಟ್ ತಂದಿದ್ದಾರೆ, ಎಷ್ಟು ಖರ್ಚು ಮಾಡಿದ್ದಾರೆ, ಯಾವ ಕೆಲಸ ಆ ಮೂಲಕ ಆಗುತ್ತಿದೆ ಎಂದು ನಮಗೆ ಗೊತ್ತಾಗುವುದೇ ಇಲ್ಲ. ಯಾರು ತೆಗೆದುಕೊಂಡು ಏನು ಮಾಡುತ್ತಾರೋ ಗೊತ್ತಾಗುವುದಿಲ್ಲ, ಆದರೆ ಕೆಲಸ ಆಗಿದೆ ಎಂದು ಹೇಳುತ್ತಾರೆ. ಆದ್ದರಿಂದ ಮಾನ್ಯ ಸಚಿವರು ಎಂಪಿಗಳಿಗೆ ಬರುವ ಎರಡು ಕೋಟಿ ರೂಪಾಯಿಗಳ ಕೆಲಸವನ್ನು ಟೆಂಡರ್ ಮೂಲಕ ಮಾಡುವಂತಾಗಬೇಕು. ಎಲ್ಲಿ ಯಾವ ಕೆಲಸ ಆಗುತ್ತಿದೆ ಎಂದು ನಮಗೆ ಗೊತ್ತಾಗಬೇಕು. ಎಂಪಿಗಳ ಎಂಟು ಕ್ಷೇತ್ರಗಳಲ್ಲಿ ಗ್ರ್ಯಾಂಟ್‌ನ ಮೂಲಕ ಎಷ್ಟೆಷ್ಟು ಕೆಲಸಗಳು ಆಗಿವೆ, ಎಷ್ಟು ಖರ್ಚು ಮಾಡಿದ್ದಾರೆಂದು ಗೊತ್ತಾಗಬೇಕು. ಆಗ ಪಾರದರ್ಶಕ ಎನ್ನುವ ಶಬ್ದಕ್ಕೆ ಅರ್ಥ ಬರುತ್ತದೆ. ಅದಕ್ಕೆ ಬಿಡುಗಡೆಯಾದ ಹಣ, ಆದ ಕೆಲಸ, ಖರ್ಚಾದ ಹಣ, ಲ್ಯಾಪ್ಸ್ ಆದ ಹಣ, ಮುಂತಾದ ವಿವರಗಳು ಎಲ್ಲರಿಗೂ ಗೊತ್ತಾಗಬೇಕು. ಮಾನ್ಯ ಷಡಾಕ್ಷರಿಯವರು ಹೇಳಿದಂತೆ ಬಿಲ್‌ನ್ನು ನಾವು ಸದುದ್ದೇಶದಿಂದ ತಂದಿದ್ದೇವೆ. ಅದು ದುರ್ಬಳಕೆಯಾಗಬಾರದು ಎಂಬ ಉದ್ದೇಶ ನಮ್ಮದಾಗಿದೆ. ಪಾರದರ್ಶಕವಾಗಿ ಕೆಲಸವಾಗಬೇಕೆಂಬ ದೃಷ್ಟಿಯಿಂದ ನಾನು ಹೇಳಿದ್ದೇನೆ. ಕೃತಜ್ಞತೆಗಳು.

+ ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ) :— ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಪ್ರಾವಿಜನ್ಸ್ ನಾಟ್ ಟು ಅಪ್ಲೈ ಸರ್ಟೇನ್ ಪ್ರಾಜೆಕ್ಟ್ಸ್..... ಇದು ಏನಿದೆ, ಇವುಗಳು ವರ್ಲ್ಡ್ ಬ್ಯಾಂಕ್ ಪ್ರಾಜೆಕ್ಟ್ಸ್, ಏಶಿಯ ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್, ನೆದರ್‌ಲ್ಯಾಂಡ್ ಪ್ರಾಜೆಕ್ಟ್ಸ್, -ಇವುಗಳನ್ನು ನೀವು ಈ ಕೆಟಗರಿಯಲ್ಲಿ ತರುವುದಿಲ್ಲ. ನನ್ನ ಕ್ಷೇತ್ರದಲ್ಲಿ ಆಗಿರತಕ್ಕಂಥ ಒಂದು ಉದಾಹರಣೆಯನ್ನು ತಮಗೆ ಹೇಳಬಯಸುತ್ತೇನೆ. ಮಾನ್ಯ ಎಂ.ಪಿ. ಪ್ರಕಾಶ್‌ರವರು ಇದ್ದಾಗ ಹಿಂದಿನ ಸರಕಾರದಲ್ಲಿ ಅದನ್ನು ಫ್ರೀ-ಕ್ವಾಲಿಫೈ ಮಾಡಿ, ಫ್ರೀ-ಬಿಡ್ ಮಾಡಿ, ಕೇವಲ ನ್ಯಾಷನಲ್ ಲೆವೆಲ್ ಟೆಂಡರ್ಸ್ ಹಾಕಬೇಕೆಂದು ಮಾಡಿದರು. ಇಂಟರ್‌ನ್ಯಾಷನಲ್ ವಿಡ್ ಏನಿದೆ, ಇದು ಅವರಿಗೆ ಅಪ್ಲೈ ಆಗುವುದಿಲ್ಲ ಎಂದು ಬಿಟ್ಟುಬಿಟ್ಟಿದ್ದೀರಿ. ಆದರೆ ಅವರು ಏನು ಮಾಡಿದರು? ಹೀಗೆ ಅಸಿಸ್ಟೆನ್ಸ್ ಕೊಡತಕ್ಕಂಥ

ಪ್ರಾಜೆಕ್ಟ್‌ಸ್‌ನಲ್ಲಿ ಏನಾಗುತ್ತದೆ ಅಂದರೆ, ಪ್ರಿ-ಕ್ವಾಲಿಫಿಕೇಶನ್, ಪ್ರೀ-ಬೀಡ್ ಮಾಡುವಾಗ ಈ ಲೋಕಲ್ ಟೆಂಡರ್‌ದಾರರೆಲ್ಲರೂ ಎಲಿಮಿನೇಟ್ ಆಗಿ ಬಿಡುತ್ತಾರೆ. ಎರಡನೆಯದಾಗಿ ಅವುಗಳು 200-300 ಪರ್‌ಸೆಂಟ್ ಮೇಲೆ ಹಾಕುತ್ತಾರೆ ಇಂಥ ಪ್ರಾಜೆಕ್ಟ್‌ಗಳಿವೆ. ಉದಾಹರಣೆಗೆ ಬೇಕಾದರೆ ತಾವುಗಳು ನೆದರ್‌ಲ್ಯಾಂಡ್ ಪ್ರಾಜೆಕ್ಟ್‌ನಲ್ಲಿ, ಆ ಸ್ಕೀಮ್‌ನಲ್ಲಿ ವಿವರಗಳನ್ನು ನೋಡಿ. ಉದಾಹರಣೆಗೆ 70 ಕೋಟಿ ರೂಪಾಯಿಗಳ ಸ್ಕೀಮ್‌ಗೆ ನಾವು ಮಾಡಿದರೆ ಇವೊತ್ತು ೧೦೦-೧೧೦ ಕೋಟಿ ರೂಪಾಯಿಗಳಷ್ಟು ಹಣವನ್ನು ಕೊಡಬೇಕಾದ ಪರಿಸ್ಥಿತಿಯು ಆ ಯೋಜನೆಗಳಿಗೆ ಬಂದಿದೆ. ದಯಮಾಡಿ ಈ ಬಗ್ಗೆ ಪರಿಶೀಲಿಸಬೇಕು. ಉದಾಹರಣೆಗೆ ರೂರಲ್ ವಾಟರ್ ಸಪ್ಲೈ ಸ್ಕೀಮ್‌ಗೆ ಅವರು ಟೆಂಡರ್ ಹಾಕುತ್ತಾರೆ. ನಮ್ಮಲ್ಲಿನ ಒಂದು ಪ್ರಾಜೆಕ್ಟ್‌ಗೆ ಅವರು ೧ ಕೋಟಿ ೧೦ ಲಕ್ಷ ರೂಪಾಯಿಗಳಿಗೆ ಟೆಂಡರ್ ಹಾಕಿದರು. ಮುಂದೆ ಲ್ಯಾಂಡ್ ಅರ್ಮಿಯವರನ್ನು ಆದರಲ್ಲಿ ಅಂದರೆ ಟೆಂಡರ್‌ನಲ್ಲಿ ಭಾಗವಹಿಸುವಂತೆ ಮಾಡಿದ ಮೇಲೆ, ಅದೇ ಮೊದಲ ಮೂರು ಕೋಟಿಯವರು ಎರಡು ಕೋಟಿಗಳಿಗೆ ಬಂದರು. ಸಬ್ಸಿಡೈಂಟಲೀ, ಅದಕ್ಕೂ ನಾವು ಒಪ್ಪದ ಕಾರಣ ಕೊನೆಗೆ ಒಂದು ಕೋಟಿ ಹತ್ತು ಲಕ್ಷಗಳಿಗೆ ಒಪ್ಪಿಕೊಂಡು ಆ ಕೆಲಸವನ್ನು ಪ್ರಾರಂಭ ಮಾಡಿದರು. ಆದ್ದರಿಂದ ದಯಮಾಡಿ ಅವರನ್ನು ಎಕ್ಸ್‌ಕ್ಲೂಡ್ ಮಾಡಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ :— ವರ್ಲ್ಡ್ ಬ್ಯಾಂಕ್‌ನವರು ಅದಕ್ಕೆ ಗ್ಲೋಬಲ್ ಟೆಂಡರ್ ಕರೆಯುತ್ತಾರೆ. ಅದಕ್ಕೆ ಇದಕ್ಕಿಂತ ಸ್ಟ್ರಿಕ್ಟ್ ಎನ್‌ಫೋರ್ಸ್‌ಮೆಂಟ್ ಇರುವುದರಿಂದ ಆ ಬಾಧೆ ಬರುವುದಿಲ್ಲ.

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ :— ನೆದರ್‌ಲ್ಯಾಂಡ್ ಪ್ರಾಜೆಕ್ಟ್ಸ್ ಎಕ್ಸ್‌ಟರ್ನಲ್ ಎಡೆಡ್ ಅಲ್ಲವೆ? ಅದರಲ್ಲಿ ಹಾಕತಕ್ಕಂಥವರೆಲ್ಲರೂ ಹೆಚ್ಚಾಗಿ ಆಂಧ್ರಪ್ರದೇಶದವರೇ ಆಗಿರುತ್ತಾರೆ. ಅವರು ೨೦೦-೩೦೦ ಪರ್‌ಸೆಂಟ್‌ನಷ್ಟು ಹೆಚ್ಚಿಗೆ ಹಾಕಿ...

ಶ್ರೀ ಕಾಗೋಡು ತಿಮ್ಮಪ್ಪ :— ಅದು ಗ್ಲೋಬಲ್ ಟೆಂಡರ್ ಅಲ್ಲವೇ?

ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮನಗೌಡ :— ಹೌದು, ಆದರೆ ಅವರು ಉಪಯೋಗಿಸತಕ್ಕಂಥ ಮೆಟೀರಿಯಲ್‌ಗಳು ಏನು? ಅದು ಕೂಡ ಲೋಕಲ್ ಅಲ್ಲವೆ? ಗ್ಲೋಬಲ್ ಟೆಂಡರ್‌ದಾರರು ಕೂಡ ಲೋಕಲ್ ಮೆಟೀರಿಯಲ್‌ಗಳನ್ನೇ ಹಾಕುತ್ತಾರೆ.

ಶ್ರೀ ಸಿ.ಎಸ್. ನಾಡಗೌಡ :— ಮಾನ್ಯ ಅಧ್ಯಕ್ಷರೇ, ನೆದರ್‌ಲ್ಯಾಂಡ್ ಮತ್ತು ಡೆನಿಡಾ ಯೋಜನೆಯಲ್ಲಿ ಅಳವಡಿಸತಕ್ಕಂಥ ಸ್ಪೆಸಿಫಿಕೇಶನ್ಸ್ ಏನಿವೆ, ಅವುಗಳನ್ನು ಯಾವಾಗ ತೆಗೆದುಕೊಳ್ಳಬೇಕೆಂದು ಸ್ಪೆಸಿಫೈ ಮಾಡಿದ್ದಾರೆ. ಅವರು ಬೇಕಾದ ಹಾಗೆ ಲೋಕಲ್ ಮಾರ್ಕೆಟ್‌ನಿಂದ ತೆಗೆದುಕೊಳ್ಳುವ ಹಾಗಿಲ್ಲ.

ಅಧ್ಯಕ್ಷರು :— ಚರ್ಚೆ ಮಾಡದೇ ಸಜೆಶನ್ಸ್ ಮಾತ್ರ ಕೊಡಿ... ಮಂತ್ರಿಗಳು ತಮ್ಮ ಪ್ರಸ್ತಾಪಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮನಗೌಡ :— ನಾನು ಹೇಳುತ್ತಿರುವುದು, ಅವರು ಉಪಯೋಗಿಸುತ್ತಿರುವುದು ಲೋಕಲ್ ಮೆಟೀರಿಯಲ್ಸ್ ಎಂದು; ನೀವು ಅವರನ್ನು ಗ್ಲೋಬಲ್ ಟೆಂಡರ್‌ದಾರರು ಎಂದು ಕರೆಯುತ್ತೀರಿ. ಅವರಿಗೆ ೨೦೦-೩೦೦ ಪರ್‌ಸೆಂಟ್‌ನಷ್ಟು ಹೆಚ್ಚು ಕೊಟ್ಟು ಅವರನ್ನು ಇನ್‌ವೈಟ್ ಮಾಡತಕ್ಕಂಥಾದ್ದರಲ್ಲಿ ಅರ್ಥವಿಲ್ಲ. ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಇದ್ದರೆ ಅಂಥವರನ್ನು ಇನ್‌ವೈಟ್ ಮಾಡಿ, ನಾವು ಬೇಡವೆನ್ನುವುದಿಲ್ಲ. ೨-೩ ಕೋಟಿ ಪ್ರಾಜೆಕ್ಟ್‌ಗಳಿಗೆ ಗ್ಲೋಬಲ್ ಟೆಂಡರ್‌ದಾರರು ಬೇಡ, ಅದಕ್ಕಿಂತ ಹೆಚ್ಚಿನದಿದ್ದರೆ ಅವರನ್ನು ಇನ್‌ವೈಟ್ ಮಾಡಿ ಎಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :— ಮಾನ್ಯ ಅಧ್ಯಕ್ಷರೇ, ಈ ಟೆಂಡರ್‌ಗಳನ್ನು ಆಹ್ವಾನಿಸುವುದು ಪ್ರಾಧಿಕಾರದವರ ಕರ್ತವ್ಯ. ಸರ್ಕಾರ ಹಾಕಿರುವ ಈ ಕರ್ತವ್ಯಗಳೇನಿವೆ ಅವುಗಳು ಹೊರತಾದವುಗಳೇನಲ್ಲ. ಈ ಟೆಂಡರ್‌ಗಳಲ್ಲಿ ಏನು ಅನಾಹುತಗಳು ಆಗುತ್ತವೆ, ಅವುಗಳನ್ನು ತಪ್ಪಿಸುವುದು ಹೇಗೆ ಎನ್ನುವುದಕ್ಕೆ ಈ ಬಿಲ್ಲನ್ನು ತಂದಿರುವುದು. ಟೆಂಡರ್ ಕರೆಯುವುದು ಮುಂತಾದ ಕರ್ತವ್ಯಗಳೆಲ್ಲವನ್ನೂ ಎಲ್ಲರೂ ಮಾಡುತ್ತಾರೆ. ನಮ್ಮ ಗದಗ ಜಿಲ್ಲೆಯ ಉದಾಹರಣೆಯನ್ನು ನಾನು ಹೇಳಬಯಸುತ್ತೇನೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಈಗ ಉಪಸ್ಥಿತರಿಲ್ಲ. ಅವರು ಬಹುಶ: ಹೆಚ್ಚು ಪಾರದರ್ಶಕರು. ಅವರು ಹೋದಲ್ಲೆಲ್ಲಾ ತಮ್ಮ ಪಾರದರ್ಶಕತೆಯ ಬಗ್ಗೆ ಹೇಳುತ್ತಾರೆ. ಅವರಿಗೆ ನಾನು ಒಂದು ಪತ್ರವನ್ನು ಬರೆದಿದ್ದೇನು. ಗದಗ ಜಿಲ್ಲಾ ಪಂಚಾಯತ್‌ನ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಪ್ರತಿ ತಾಲ್ಲೂಕಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೊಟ್ಟರು. ಕಾಮಗಾರಿಗಳಿಗೆ ಕೊಟ್ಟ ಹಣ ಹೇಗೆ ವಿನಿಯೋಗ ಆಗುತ್ತದೆ ಎಂಬುದನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಹಾಗೋಡು ತಿಮ್ಮಪ್ಪ :— ತಾವುಗಳು ವಿವರಗಳಿಗೆ ಹೋಗದೆ ಈ ಕ್ಲಾಸ್‌ನಲ್ಲಿ ಏನಾಗಬೇಕಾಗಿದೆ ಎಂಬುದಕ್ಕೆ ಸಜೆಶನ್ಸ್ ಕೊಡಿ....

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೇ, ಉದಾಹರಣೆಗೆ ಜಿಲ್ಲಾ ಪಂಚಾಯತ್‌ನವರು ಒಂದೊಂದು ಕೋಟಿ ರೂಪಾಯಿಗಳ ಟೆಂಡರ್‌ನ್ನು ಕರೆದು. ಕರೆದು 20 ಪರ್‌ಸೆಂಟ್‌ನಷ್ಟು ಬಿಡ್ ಹಾಕಿದರು. ಆದರೆ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಅವರನ್ನು ಕರೆದು ಆ ಎಲ್ಲಾ ಟೆಂಡರ್‌ಗಳನ್ನು ತೆಗೆದು ಎಲ್ಲರಿಗೂ 10-15 ಪರ್‌ಸೆಂಟ್‌ನಷ್ಟು ಹೆಚ್ಚು ಹಾಕಿ ಅಪ್ರೂವಲ್ ಕೊಟ್ಟರು. ಈ ವಿಚಾರವನ್ನು ನಮ್ಮ ಜಿಲ್ಲಾ ಉಸ್ತುವಾರಿ ಸಚಿವರಿಗೆ ನೇರವಾಗಿ ಬರೆದೆ. ಅವರು ನನ್ನನ್ನು ಕರೆದುಕೊಂಡು ಎಸ್ಪಿಯವರಿಗೆ ಹೋಗಬೇಕಾಗಿತ್ತು.

ಆದರೆ ತಪ್ಪಾಗಿ ಆಗಲಿಲ್ಲ. ಇಂಥ ವಿಚಾರಗಳನ್ನು ಹೇಗೆ ಸರಿಪಡಿಸುತ್ತೀರಿ ಎಂದು ನಾನು ತಮ್ಮಲ್ಲಿ ಕೇಳುತ್ತೇನೆ ಟೆಂಡರ್‌ಗಳನ್ನು ಒಡೆಯುವ ಹಕ್ಕು ಒಬ್ಬನೇ ಅಧಿಕಾರಿಗೆ ಕೊಡಬೇಡಿ. ಜಿಲ್ಲಾ ಪಂಚಾಯತ್ ಎಕ್ಸಿಕ್ಯುಟೀವ್ ಇಂಜಿನೀಯರ್ ಫೈನಲ್ ಎಂದು ಮಾಡಬೇಡಿ. ಆತನು ತಾನು ಮಾಡಿದ್ದು ಸರಿ ಎಂದು ಹೇಳುತ್ತಾನೆ. ಹೀಗೆ ಒಬ್ಬ ಅಧಿಕಾರಿಗೆ ಅಧಿಕಾರ ಕೊಡಬೇಡಿ. ಆ ಅಧಿಕಾರವನ್ನು ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಕೊಟ್ಟಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಮೊದಲು ಇದು ಜಿಲ್ಲಾ ಪಂಚಾಯತ್‌ಗೆ ಹೋಗುವುದಿಲ್ಲ. ಮೊದಲು ಇವರು ಮಾಡಿ ಫೈನಲ್ ಹಂತದಲ್ಲಿ ಜಿಲ್ಲಾ ಪಂಚಾಯತ್‌ಗೆ ಕಳುಹಿಸಿದರು. ಇದನ್ನು ತಾವುಗಳು ದಯಮಾಡಿ ಅಭ್ಯಾಸ ಮಾಡಬೇಕು. ಜಿಲ್ಲಾ ಪಂಚಾಯತ್‌ನಲ್ಲಿ

(ಗೊಂದಲ)

ಅವ್ಯವಹಾರವಾಯಿತು. ಇದನ್ನು ತಪ್ಪಿಸಲು ಕ್ರಮ ಜರುಗಿಸಿ ಎಂದು ನಾನು ಸಜೆಶನ್ಸ್ ಕೊಡುತ್ತಿದ್ದೇನೆ. ಕೇವಲ ಎಕ್ಸಿಕ್ಯುಟೀವ್ ಇಂಜಿನಿಯರ್‌ಗೆ ಅಧಿಕಾರ ಕೊಟ್ಟರೆ ಅದು ಜಿಲ್ಲಾ ಪಂಚಾಯತ್‌ಗೆ ಹೋಗುವುದಿಲ್ಲ. ಅವರು ಎಲ್ಲಾ ಮಾಡಿ ಕೊನೆಗೆ ಜಿಲ್ಲಾ ಪಂಚಾಯತ್‌ಗೆ ಕಳುಹಿಸಿಕೊಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ನಡೆದ ವಿಚಾರವನ್ನು ತಮ್ಮ ಮುಂದಿಡುತ್ತಿದ್ದೇನೆ. ಅದೇ ವಿಚಾರ ಜಿಲ್ಲಾ ಪಂಚಾಯತ್‌ಗೆ ಹೋಗಿದ್ದರೆ ಅಂಥ ಅಕ್ರಮ ಆಗುತ್ತಿರಲಿಲ್ಲ. ಎಕ್ಸಿಕ್ಯುಟೀವ್ ಇಂಜಿನಿಯರ್ ಅಪ್ರೂವ್ ಮಾಡಿದರೂ ಕೂಡ ಕೊನೆಗೆ ಜಿಲ್ಲಾ ಪಂಚಾಯತ್ ಕಮಿಟಿಗೆ ಹೋಗಿ ಅಂತಿಮ ಅಪ್ರೂವಲ್‌ನ್ನು ಪಡೆದುಕೊಳ್ಳುವುದಾಗಬೇಕೆಂದು ನಾನು ಹೇಳುತ್ತಾ ಇದ್ದೇನೆ. ಹಾವೇರಿಯಲ್ಲಿ, ಕೊಳವೆಬಾವಿಗಳ 40 ರೂಪಾಯಿಗಳ ರೇಟ್ ಪ್ರಮಾಣದ ವ್ಯವಹಾರವು ಒಬ್ಬ ಅಧಿಕಾರಿಗೆ ಅಧಿಕಾರ ಕೊಟ್ಟ ಕಾರಣದಿಂದಾಗಿ ಆಗುವಂತಾಯಿತು. ನಮ್ಮ ಗದಗ್ ಜಿಲ್ಲೆಯಲ್ಲಿನ ಡಿಸಿಯವರು ಪ್ರಾಮಾಣಿಕ ಅಧಿಕಾರಿಯಾಗಿದ್ದ ಕಾರಣ ಎಲ್ಲವೂ ಸುಗಮವಾಗಿ ಆಯಿತು. ನಮ್ಮಲ್ಲಿ ರೂ. 40 ಕೊಟ್ಟರೆ ಅದೇ ರೇಟ್ ಹಾವೇರಿಯಲ್ಲಿ 65 ರೂಪಾಯಿಗಳು ಆಯಿತು. ಆ ಕಾರಣಕ್ಕಾಗಿ ಈಗ ಇರುವ ಬಿಲ್‌ನಿಂದ ಆಗುವುದಿಲ್ಲ, ಅದರಲ್ಲಿ ಸ್ವಲ್ಪ ಪರಿವರ್ತನೆಯನ್ನು ತರಬೇಕೆಂದು ಹೇಳುತ್ತಾ ಇದ್ದೇನೆ. ಫೈನಲ್ ಆಗುವ ಹೊತ್ತಿಗೆ ಕೇವಲ ಒಬ್ಬ ಅಧಿಕಾರಿಗೆ ಟೆಂಡರ್ ಒಡೆದು ಅಪ್ರೂವಲ್ ಮಾಡತಕ್ಕಂಥ ಅಧಿಕಾರವನ್ನು ಕೊಡಬೇಡಿ.

ಅಧ್ಯಕ್ಷರು :— ತಾವುಗಳು ಹೇಳಿದ್ದನ್ನೇ ಪುನಃ ಪುನಃ ಹೇಳುತ್ತಿದ್ದೀರಿ. ಏನಾದರೂ ಹೊಸ ವಿಷಯಗಳಿದ್ದಲ್ಲಿ ಹೇಳಿ. ತಮ್ಮ ಭಾಷಣವನ್ನು ಬೇಗ ಮುಗಿಸಿ....

ಶ್ರೀ ಎಸ್.ಎಸ್. ಪಾಟೀಲ್ :— ಟೆಂಡರ್‌ಗಳನ್ನು ಫೈನಲ್ ಮಾಡುವಂಥ ಅಧಿಕಾರ ಜಿಲ್ಲಾ ಪಂಚಾಯತ್‌ಗೆ ಹೋಗಬೇಕು. ಆ ರೀತಿಯಾಗಿ ಮಾಡಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ.

+ ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಅಧ್ಯಕ್ಷರೇ, ನಾನು ಒಂದು ಕ್ಲಾರಿಫಿಕೇಷನ್‌ನ್ನು ಕೇಳಬಯಸುತ್ತೇನೆ. ಇದರಲ್ಲಿ ಟೆಂಡರ್ ಬುಲೆಟಿನ್ ಬಗ್ಗೆ ಉಲ್ಲೇಖ ಮಾಡಿದ್ದೀರಿ. ಇಷ್ಟರ ತನಕ ಬೇರೆ ಬೇರೆ ಕಡೆಗಳಲ್ಲಿ ಸಣ್ಣ ಸಣ್ಣ ಪತ್ರಿಕೆಗಳಲ್ಲಿ ಯಾವುದೋ ಒಂದು ಮೂಲೆಯಲ್ಲಿ ಜಾಹೀರಾತು ಕೊಟ್ಟು ಟೆಂಡರ್‌ಗಳನ್ನು ಕಾಲ್‌ಫಾರ್ ಮಾಡುತ್ತಿದ್ದರು. ಇನ್ನು ಕಡ್ಡಾಯವಾಗಿ ಟೆಂಡರ್ ಬುಲೆಟಿನ್‌ನಲ್ಲಿಯೇ ಬರಬೇಕೆಂಬ ವ್ಯವಸ್ಥೆಯನ್ನು ತಾವುಗಳು ತರುತ್ತೀರಾ? ಎರಡನೆಯದಾಗಿ ಉಪಬಂದದಲ್ಲಿ ಕೆಲವು ಯೋಚನೆಗಳಿಗೆ ಅನ್ವಯವಾಗದಿರುವುದು ಎಂದು ಉಲ್ಲೇಖವಿದೆ. ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್, ವರ್ಲ್ಡ್ ಬ್ಯಾಂಕ್, ಮುಂತಾಗಿ ಇನ್ನಿತರ ಯೋಜನೆಗಳಿಂದ ಸಾವಿರಾರು ಕೋಟಿ ರೂಪಾಯಿಗಳ ಕಾಮಗಾರಿಗಳು ಆಗುವುದರಿಂದ ಲೋಕಲ್ ಟೆಂಡರ್ಸ್ ಬಗ್ಗೆ ಅವರು ಏನು ಅನುಷ್ಠಾನಕ್ಕೆ ತರಲು ಹೋಗುತ್ತಿದ್ದಾರೋ ಅದಕ್ಕೆ ಈ ನಿಬಂಧನೆಗಳನ್ನು ತರಲು ಆಗುತ್ತದೆಯೇ? ಎಂಬುದನ್ನು ಗಂಭೀರವಾಗಿ ಯೋಚಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾಗೆಯೇ ರಾಜ್ಯ ಸರಕಾರದ ಅನುದಾನಿತ ಸಂಸ್ಥೆಗಳಿಗೂ ಈ ನಿಯಮಗಳು ಅನ್ವಯವಾಗುತ್ತದೆಯೇ? ಎಂಬುದನ್ನು ಗಂಭೀರವಾಗಿ ಯೋಚಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಕಾಗೆಯೇ ರಾಜ್ಯ ಸರಕಾರದ ಅನುದಾನಿತ ಸಂಸ್ಥೆಗಳಿಗೂ ಈ ನಿಯಮಗಳು ಅನ್ವಯವಾಗುತ್ತದೆಯೇ ಎಂಬುದನ್ನು ಕೇಳುತ್ತಾ, ನಿಯಮಗಳನ್ನು ಅವರಿಗೂ ಅನ್ವಯ ಮಾಡಬೇಕೆಂದು ಕೋರುತ್ತೇನೆ. ಇನ್ನು ಅಧ್ಯಾಯ 3ರಲ್ಲಿ ಪಾಯಿಂಟ್ ನಂಬರ್ 20-ಇದರಲ್ಲಿ ಸದ್ಭಾವನೆಯಿಂದ ಕೈಗೊಂಡ ಕ್ರಮಕ್ಕೆ ಪ್ರತಿರಕ್ಷೆ ಎಂಬ ಪಾಯಿಂಟ್ ಇದೆ. ಇದರಲ್ಲಿ ಇಷ್ಟೆಲ್ಲಾ ಉಲ್ಲೇಖ ಮಾಡುವಾಗ ಇದೊಂದೇ ಪಾಯಿಂಟ್‌ನಿಂದಾಗಿ ಎಲ್ಲವೂ ನಿಸ್ತೇಜವಾಗುತ್ತದೋ ಎಂಬ ಸಂಶಯವು ನನ್ನಲ್ಲಿದೆ. ಅಧಿಕಾರವನ್ನು ಚಲಾಯಿಸಲು, ಅಧಿಕಾರವನ್ನು ಹೊಂದಿರುವ ಯಾವೊಬ್ಬ ಅಧಿಕಾರಿ ಅಥವಾ ಪ್ರಾಧಿಕಾರದ ವಿರುದ್ಧ ಈ ಅಧಿನಿಯಮದ ಅಡಿಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕ್ರಮದ ಸಂಬಂಧದಲ್ಲಿ ತಾವೇ ಅಥವಾ ಇನ್ನಿತರ ನ್ಯಾಯಿಕ ವ್ಯಮಚಾರಗಳನ್ನು ಹೂಡತಕ್ಕಂಥಾದ್ದಲ್ಲ ಎಂದು ಹೇಳತಕ್ಕಂಥಾದ್ದು ಅನೇಕ ಭ್ರಷ್ಟಾಚಾರಗಳಿಗೆ ಕಾರಣವಾಗುತ್ತದೆ ಎಂಬ ಬಗ್ಗೆ ತಾವುಗಳು ಹೆಚ್ಚಿನ ಬೆಳಕನ್ನು ಚೆಲ್ಲಿ ಸ್ಪಷ್ಟಪಡಿಸಬೇಕೆಂದು ಕೋರುತ್ತೇನೆ. ಆರೋಗ್ಯ ಇಲಾಖೆಯಲ್ಲಿ ತಾವುಗಳು ಹೆಚ್ಚಿನ ಬೆಳಕನ್ನು ಚೆಲ್ಲಿ ಸ್ಪಷ್ಟಪಡಿಸಬೇಕೆಂದು ಕೋರುತ್ತೇನೆ. ಆರೋಗ್ಯ ಇಲಾಖೆಯಲ್ಲಿ ತಾವುಗಳು ತಪಾಸಣೆ ಮಾಡಿದರೆ 50 ಲಕ್ಷಗಳಷ್ಟು ಕಾಂಪೋಸ್ ಟ್ಯಾಬ್ಲೆಟ್‌ಗಳನ್ನು ಖರೀದಿಸಿಟ್ಟಿದ್ದಾರೆ. ಇಷ್ಟು ಖರೀದಿಸುವಾಗ ಯಾವುದೇ ನೀತಿನಿಯಮಗಳು ಬರುವುದಿಲ್ಲವೆ? ಈ ಬಗ್ಗೆ ಒಂದು ಉದಾಹರಣೆ ಕೊಟ್ಟಿದ್ದೇನೆ ಅಷ್ಟೆ. ಇಂಥ ಒಂದು ಪಾರದರ್ಶಕತೆಯ ವಿಚಾರದ ಜೊತೆಯಲ್ಲಿ ರಾಜ್ಯ ಸರಕಾರಗಳ ಇಲಾಖೆಯಿಂದ ಹಾಗೂ ಅನುದಾನಿತ ಸಂಸ್ಥೆಗಳ

ಪತಿಯಿಂದ ತರುವಂಥ ಎಲ್ಲಾ ಕಾಮಗಾರಿಗಳಿಗೆ ನಿಶ್ಚಿತವಾದ ಗ್ಯಾರಂಟಿ ಪೀರಿಯಡ್‌ನ್ನು ಬರುವಂಥಾದ್ದು ಆ ಕ್ಲಾಸ್‌ನ್ನು ಅದರಲ್ಲಿ ದಯವಿಟ್ಟು ಇನ್‌ಕ್ಲೂಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಅಂತೆಯೇ ಏನಾದರೂ ಹೊಸ ಉಪಯುಕ್ತ ತಿದ್ದುಪಡಿಯನ್ನು ತರುವುದಿದ್ದರೆ ತರಬೇಕೆಂದು ಹೇಳಬಯಸುತ್ತೇನೆ. ಹಾಗೆಯೇ ಇದಕ್ಕೆ ಸಂಬಂಧಪಟ್ಟ ಅಧಿಕಾರಿಯನ್ನು ಜವಾಬ್ದಾರಿಯುತನನ್ನಾಗಿ ಮಾಡುವಂತಹ ಕ್ಲಾಸ್‌ನ್ನು ಕೂಡ ಇದರಲ್ಲಿ ಸೇರಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಇದೇ ಅವಧಿಯಲ್ಲಿ ಕಾಮಗಾರಿಗಳು ಹಾಳಾಗಿದ್ದಲ್ಲಿ ದುರಸ್ತಿಗೊಳಿಸುವಂಥ ಅಥವಾ ಸರಿಪಡಿಸುವಂಥ ವ್ಯವಸ್ಥೆಯನ್ನು ಕೂಡ ಸಂಬಂಧಪಟ್ಟ ಅಧಿಕಾರಿಗೆ ವಹಿಸಬೇಕೆಂದು, ನಿಯಮ ಇರುವಂಥ ಕಾಮಗಾರಿಗಳನ್ನು ತಾವುಗಳು ಮನುಷ್ಯನಿಗೆ ತಂದಲ್ಲಿ ಅದರಿಂದ ತುಂಬಾ ಸಂತೋಷವಾಗುತ್ತದೆ ಎಂಬ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಶಿವಣ್ಣ (ಆರ್ಥಿಕ ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧಪಕ್ಷದ ನಾಯಕರು, ಮಾನ್ಯ ಸಿಂಧ್ಯಾರವರು, ಮಾನ್ಯ ವಿಶ್ವೇಶ್ವರ ಹೆಗಡೆಯವರು, ಮಾನ್ಯ ಬಚ್ಚೇಗೌಡರು, ಎಸ್.ಎಸ್. ಪಾಟೀಲ್‌ರವರು ಮುಂತಾಗಿ ಅನೇಕ ಜನ ಮಾನ್ಯ ಸದಸ್ಯರುಗಳು ಈ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದನ್ನು ಏತಕ್ಕೆ ಸ್ವಲ್ಪ ತಡವಾಗಿ ತರಬೇಕಾಯಿತು ಎಂಬ ಬಗ್ಗೆ ಮಾನ್ಯ ಸಿಂಧ್ಯಾರವರು ತಮ್ಮ ಅನುಭವದ ಹಿನ್ನಲೆಯಲ್ಲಿ ಹೇಳಿದ್ದಾರೆ. ಇಂಥ ವಿಷಯಗಳಲ್ಲಿ ಪಾರದರ್ಶಕತೆ ಇರಬೇಕೆಂಬ ಉದ್ದೇಶದಿಂದ ಇದನ್ನು ಪ್ರಮುಖತಃ ತರಲಾಗಿದೆ. ನಮ್ಮ ಸರಕಾರ ಅಧಿಕಾರಕ್ಕೆ ಬಂದ ನಂತರ ನಮ್ಮ ಮುಖ್ಯಮಂತ್ರಿಯವರು ಕೆಲವು ತಿದ್ದುಪಡಿಯನ್ನು ಮಾಡಿ ಅದರ ಮೂಲಕ ೪-೧೦-೨೦೦೦ ದಿಂದ ಪಾರಿಗೊಳಿಸಿದೆ. ಮಾನ್ಯ ಸದಸ್ಯರುಗಳು ಅನೇಕ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಟೆಂಡರ್‌ನ ವಿಚಾರದಲ್ಲಿ ಎಲ್ಲರೂ ತಿಳುವಳಿಕೆಯನ್ನು ಹೊಂದಿದ್ದಾರೆ. ಟೆಂಡರ್‌ನ ಕಾರ್ಯವ್ಯಾಪ್ತಿಯನ್ನು ನಿಯಂತ್ರಣ ಮಾಡಲು ಯಾವುದೇ ಒಂದು ಶಾಸನಬದ್ಧವಾದ ವ್ಯವಸ್ಥೆ ಇಲ್ಲ ಎಂದಾದರೆ ಅದು ಗೊಂದಲಕ್ಕೆ ಕಾರಣವಾಗುತ್ತದೆ. ಆದ್ದರಿಂದ ಇದನ್ನು ಕಾನೂನು ಚೌಕಟ್ಟಿನ ಅಡಿಯಲ್ಲಿ, ನೀತಿನಿಯಮಗಳ ಅಡಿಯಲ್ಲಿ ವ್ಯವಸ್ಥೆಯ ಮೂಲಕ ತರಿಗೊಳಿಸಬೇಕೆಂಬ ಉದ್ದೇಶ ಸರಕಾರಕ್ಕೆ ಇದೆ. ಮಾನ್ಯ ಸದಸ್ಯರುಗಳು ಎಕ್ಸಿಬರ್‌ನಲ್ ಏಡೆಡ್ ಪ್ರಾಜೆಕ್ಟ್‌ಗಳಿಗೂ ಇದನ್ನು ಅನ್ವಯ ಮಾಡಬೇಕೆಂದು ಹೇಳಿದ್ದಾರೆ. ಇದು ಸಂಪೂರ್ಣವಾಗಿ ರಾಜ್ಯದಲ್ಲಿರತಕ್ಕಂಥ ಇಲಾಖೆಗಳು, ಸ್ವಾಯತ್ತತಾ ಸಂಸ್ಥೆಗಳು ಇದರ ವ್ಯಾಪ್ತಿಗೆ ಒಳಪಡುತ್ತವೆಯೇ ಹೊರತು ಎಕ್ಸಿಟರ್ನಲ್ ಏಡೆಡ್ ಪ್ರಾಜೆಕ್ಟ್‌ಗಳಿಗೆ ಅನ್ವಯವಲ್ಲ.

ಅವುಗಳಿಗೆ ಅವರದ್ದೇ ಆದಂಥ ನೀತಿ ನಿಯಮಗಳು ಇರುತ್ತವೆ. ಅವುಗಳು ಅಂಥ ನಿಗದಿತ ನಿಯಮಗಳ ಚೌಕಟ್ಟಿನಲ್ಲಿ ನಡೆಯುತ್ತವೆ ಎಂದು ಹೇಳಬಯಸುತ್ತೇನೆ. ಟೆಂಡರ್‌ಗಳ ವಿಚಾರದಲ್ಲಿ ಒಂದು ರೀತಿಯ ಮಾಫಿಯಾ ಗ್ಯಾಂಗ್ ಮೂಲಕ ನಡೆಯುತ್ತಿದೆಯೆಂಬುದನ್ನು ನೋಡುತ್ತಾ ಇದ್ದೇವೆ ಎಂದು ಕೂಡ ಹೇಳಿದ್ದಾರೆ. ಇದನ್ನು ಸಾಮಾನ್ಯವಾಗಿ ನಾವೆಲ್ಲರೂ ಕಾಣುತ್ತಾ ಇದ್ದೇವೆ. ಅದಕ್ಕೆ ಅನೇಕ ವಿಚಾರಗಳನ್ನು ಈ ಪುಸ್ತಕದಲ್ಲಿ ಸೇರಿಸಿದ್ದೇವೆ. ಅಪೀಲ್ ಹೋಗುವ ಅವಕಾಶವನ್ನು ಕೊಟ್ಟಿದ್ದೇವೆ. ಜೊತೆಗೆ ಯಾರು ಟೆಂಡರ್‌ನ್ನು ಅಕ್ಸೆಪ್ಟ್ ಮಾಡುತ್ತಾರೆ, ಸಂಬಂಧಪಟ್ಟ ಅಧಿಕಾರಿ ಅವರ ಪ್ರತಿಯೊಂದು ಶರಾವನ್ನು ಕೂಡ ಬರೆಯಬೇಕು. ಟೆಂಡರ್‌ನ್ನು ಒಪ್ಪಿಕೊಳ್ಳುವಾಗ ಯಾವ ಕಾರಣಕ್ಕಾಗಿ ಒಪ್ಪಲಾಯಿತು, ಟೆಂಡರ್‌ದಾರನ ಆರ್ಥಿಕ ಸ್ಥಿತಿಗತಿ, ಅವರ ಇತರ ವಿವರಗಳು ಮುಂತಾದುವುಗಳನ್ನು ಸವಿವರವಾಗಿ ಬರೆದು ಟೆಂಡರ್ ಬುಲೆಟಿನ್‌ನಲ್ಲಿ ಪ್ರಕಟ ಮಾಡುವಂಥ ವ್ಯವಸ್ಥೆ ಇದೆ. ಇದರಿಂದ ಸಾರ್ವಜನಿಕವಾಗಿ ಎಲ್ಲರಿಗೂ ಗೊತ್ತಾಗುವ ಹಾಗೆ ಆಗುತ್ತದೆ. ಅಂಥ ಸಂದರ್ಭದಲ್ಲಿ ನಮಗೆ ಅನ್ಯಾಯವಾಗಿದೆ ಎಂದು ಕಂಡು ಬಂದರೆ ಅವರು ಅಪೀಲ್ ಹೋಗಬಹುದು. ಮುಂದಿನ ಅಥಾರಿಟಿಯಲ್ಲಿ ಅಪೀಲ್ ಮಾಡುವುದರ ಮೂಲಕ ತನಗಾದ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಅವಕಾಶವಿದೆ. ಇಷ್ಟೆಲ್ಲಾ ಇದ್ದು ಟೆಂಡರ್‌ನಲ್ಲಿ ಏನಾದರೂ ವಯ್ಯಲೇಶನ್ ಆಗಿದೆ ಎಂದು ಕಂಡುಬಂದರೆ ಮೂರು ವರ್ಷಗಳವರೆಗೆ ಕಠಿಣ ಸಜೆ ಕೊಡುವ ಅವಕಾಶವನ್ನು ಕೂಡ ಕಲ್ಪಿಸಲಾಗಿದೆ. ಇದರ ಜೊತೆಗೆ ಐದು ಸಾವಿರ ರೂಪಾಯಿಗಳ ದುಲ್ಯಾನೆ ವಿಧಿಸುವ ಕಾನೂನು ಕೂಡ ಇದೆ. ಇಷ್ಟೆಲ್ಲಾ ಕಟ್ಟುನಿಟ್ಟಾಗಿ ಮಾಡುವಾಗ ವ್ಯವಸ್ಥೆಯಲ್ಲಿ ಸುಧಾರಣೆಯಾಗುತ್ತದೆಂಬ ವಿಶ್ವಾಸ ನಮಗಿದೆ ಇದರ ಜೊತೆಗೆ ತಾವುಗಳು ಕೊಟ್ಟಿರತಕ್ಕಂಥ ಸೂಚನೆಗಳನ್ನು ಕೂಡ ಅಳವಡಿಸಿಕೊಳ್ಳಬಯಸುತ್ತೇವೆ.

ಶ್ರೀ ಪಾಟೀಲ ಶಿವಾನಂದ ಸಿದ್ರಾಮಗೌಡ :— ಎಕ್ಸೆಟರ್ನಲ್ ಏಡೆಡ್ ಪ್ರಾಜೆಕ್ಟ್‌ನಲ್ಲಿ ಏನಾಗುತ್ತದೆಂದು ತಮಗೆ ಗೊತ್ತಿಲ್ಲ.

ಶ್ರೀ ವಿ. ಪಾಪಣ್ಣ :— ಸನ್ಮಾನ್ಯ ಅಧ್ಯಕ್ಷರೆ, ಅವರು ಒಬ್ಬ ಬುಲೆಟಿನ್ ಅಧಿಕಾರಿಯನ್ನು ನೇಮಿಸುವುದು ತಪ್ಪಾಗುತ್ತದೆ. ಜಿಲ್ಲಾ ಪಂಚಾಯತ್‌ನಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಿದ್ದು, ಸರ್ಕಾರ ಬಿಡುಗಡೆ ಮಾಡುವ ಕೋಟ್ಯಾಂತರ ರೂಪಾಯಿಗಳಷ್ಟು ಹಣ ಇವರ ಮುಖಾಂತರವೇ ಖರ್ಚಾಗುವಂತಾದ್ದು. ಈಗಾಗಲೇ ಕೆಲವು ಕಡೆಗಳಲ್ಲಿ, ಉದಾಹರಣೆಗೆ, ಚಾಮರಾಜನಗರದಲ್ಲಿ ಖರೀದಿಸಿದ ಲೋಪಕ್ಕೆ ಸಿ.ಓ.ಡಿ. ತನಿಖೆಯಾಯಿತು, ಅದೇ ರೀತಿ ಹಾವೇರಿ ಜಿಲ್ಲಾ ಪಂಚಾಯತ್‌ನಲ್ಲಿ ಸುಮಾರು ಮೂರೂವರೆ ಕೋಟಿ ರೂಪಾಯಿಗಳಷ್ಟು ಅವ್ಯವಹಾರವಾಯಿತು. ಅದಕ್ಕೋಸ್ಕರ ಒಬ್ಬರೇ ಅಧಿಕಾರಿ ಇರುವುದು ಬೇಡ, ಜಿಲ್ಲಾ ಪಂಚಾಯತ್‌ನಲ್ಲಿ ಈಗ ಚೀಫ್ ಇಂಜಿನಿಯರ್ ಇದ್ದಾರೆ. ಆದುದರಿಂದ, ಜಿಲ್ಲಾಧಿಕಾರಿಯವರು ಒಳಗೊಂಡಂತಿರುವ ಮುಖ್ಯ ಕಾರ್ಯನಿರ್ವಹ

ಅಧಿಕಾರಿಯವರ ನೇತೃತ್ವದಲ್ಲಿ, ಒಂದು ಸಮಿತಿ ರಚಿಸಲು ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಶಿವಣ್ಣ :— ಟೆಂಡರ್‌ಗಳನ್ನು ಪರಿಶೀಲಿಸುವುದಕ್ಕೆ ನಾವು ಸಮಿತಿಯನ್ನು ರಚಿಸುತ್ತೇವೆ. ಹಣ ಜಾಸ್ತಿಯಿದ್ದಾಗ ಪರಿಶೀಲಿಸುವುದಕ್ಕೆ ಒಂದು ವ್ಯವಸ್ಥೆ ಇದೆ. ಅದನ್ನು ಯಾವ ರೀತಿಯಲ್ಲಿ, ಮತ್ತು ಹೇಗೆ ಎಂದು ಸಂಪೂರ್ಣ ಪರಿಶೀಲಿಸಿ ತಿಳಿಯುವುದಕ್ಕೆ ಒಂದು ಪರಿಶೀಲನಾ ಸಮಿತಿ ರಚನೆ ಮಾಡುತ್ತೇವೆ. ಈ ಸಮಿತಿ ರಚಿಸುವುದರಿಂದ ಆಗ ಅನುಮಾನಗಳಿಗೆ ಅವಕಾಶವಿರುವುದಿಲ್ಲ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ವಿಧಾನಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತ ರೂಪದಲ್ಲಿರುವ 1999ರ ಕರ್ನಾಟಕ ಸಾರ್ವಜನಿಕ ಸಂಸ್ಥೆಗಳಲ್ಲಿ ಪಾರದರ್ಶಕತೆ ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2 ರಿಂದ 27ರವರೆಗೆ

ಅಧ್ಯಕ್ಷರು :— "ಖಂಡ 2 ರಿಂದ 20ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 27ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ-ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :— ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ

"ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ರೂಪದಲ್ಲಿರುವ 1999ನೇ ಸಾಲಿನ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು :— ಒಂದು ಪ್ರಕಟಣೆ ಇದೆ.

9. ಪ್ರಕಟಣೆ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡಂತೆ ಸಂದೇಶ ಬಂದಿರುತ್ತದೆ.

"ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ದಿನಾಂಕ 23-11-2000ರಂದು 2000ನೇ ಸಾಲಿನ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನು (ತಿದ್ದುಪಡಿ) ವಿಧೇಯಕವನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆ"

10. ಶಾಸನ ರಚನೆ

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಯಲಗಳ ವಿಧೇಯಕ 2000 ಪರ್ಯಾಲೋಚನಾ ಪ್ರಸ್ತಾವ

ಡಾ: ಜಿ. ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು) :— ಮಾನ್ಯ ಅಧ್ಯಕ್ಷರೆ, ಇವತ್ತು ನಮ್ಮ ರಾಷ್ಟ್ರ, ಪ್ರಪಂಚದಲ್ಲಿ ಶಿಕ್ಷಣ ಕ್ಷೇತ್ರ ಬಹಳಷ್ಟು ಬದಲಾವಣೆಯನ್ನು ನಿರಾತಂಕವಾಗಿ ಕಂಡುಕೊಂಡು ಬಂದಿದೆ. ರಾಜ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ, ಕರ್ನಾಟಕ ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲಾಗಿದ್ದು